

# 16ನೇ ವರ್ಷದ
# ವಾರ್ಷಿಕ ಸೇವಾ ವರದಿ

# ಸೇವಾಭಾರತಿ (ರಿ.)

**ಬೆಳ್ತಂಗಡಿ ತಾಲೂಕು**

**ಪ್ರಧಾನಕಛೇರಿ: ಸೇವಾನಿಕೇತನ, ಕನ್ಯಾಡಿ ॥**
**ಧರ್ಮಸ್ಥಳ ಗ್ರಾಮ – 574 216**
ದೂ. ಸಂ. : 9945491241
Web : www.sevaabharathi.org
Gmail : manager@sevaabharathi.org

**ತೆರೆದ–ಅಂಚೆ**

**ರಿಗೆ,**
**ಶ್ರೀಮತಿ/ಶ್ರೀ**

# ಅಧ್ಯಕ್ಷರ ನುಡಿ



ಆತ್ಮೀಯರೇ ನಮಸ್ಕಾರಗಳು,

ಸಮಾಜ ಮತ್ತು ವ್ಯಕ್ತಿಗಳ ನಡುವೆ ಕಟ್ಟುತ್ತಿರುವ ಸೇತುವೆಗೆ 16 ವರ್ಷ ತುಂಬಿ 17ನೇ ವರ್ಷಕ್ಕೆ ಕಾಲಿಡುವ ಈ ಸುಸಂದರ್ಭದಲ್ಲಿ ನಮ್ಮ ಸಂಸ್ಥೆಯ ಸ್ಪಷ್ಟ ಹೆಜ್ಜೆಗಳ ಬಗ್ಗೆ ತಿಳಿಸಲು ಸಂತೋಷವಾಗುತ್ತಿದೆ.

ಸಾಮಾಜಿಕ ದೌರ್ಬಲ್ಯ ಮತ್ತು ಕೊರತೆಗಳನ್ನು ನಿವಾರಿಸುವ ಚಿಕ್ಕಪುಟ್ಟ ಕಾರ್ಯಗಳೇ ಸೇವೆ ಅನಿಸಲ್ಪಡುತ್ತವೆ. ಆದರೂ ಶಾರೀರಿಕ ಮತ್ತು ಮಾನಸಿಕ ಅಂಗವೈಕಲ್ಯ ಕ್ಷೇತ್ರಗಳು ಕಡೆಗಣಿಸಲ್ಪಟ್ಟಷ್ಟು ಯಾವ ಕ್ಷೇತ್ರವೂ ಕಡೆಗಣಿಸಲ್ಪಡಲಿಲ್ಲ ಎಂದರೂ ತಪ್ಪಾಗದು.

ಆದರೂ ಬೆನ್ನುಮೂಳೆ ಮುರಿತವು ಒಂದು ದೀರ್ಘಾವಧಿ ಮತ್ತು ಜೀವನ ನಿರ್ವಹಣೆ ವೆಚ್ಚ ಅಧಿಕವಾಗಿರುವ ಒಂದು ವಿಧವಾಗಿದೆ. 2018 ರಿಂದ ಈಗಿನ ತನಕ ನಾವು ಸೇವಾಧಾಮ ಪುನಃಶ್ಚೇತನ ಕೇಂದ್ರ ನಿರ್ವಹಣೆ ಮಾಡುತ್ತಾ ಬರುತ್ತಿದ್ದು, ಈ ಕಾಲಘಟ್ಟ ಸುಲಭದ ಹೆಜ್ಜೆಗಳಾಗಿರಲಿಲ್ಲ. ಕಾಲಕಾಲಕ್ಕೆ ಸಹೃದಯಿ ಧನದಾನಿಗಳು, ಸಂಸ್ಥೆಗಳು, ಜನಪ್ರತಿನಿಧಿಗಳು, ಕಾರ್ಯಕರ್ತರ ಶ್ರಮಗಳಿಂದಾಗಿ ಈ ಕ್ಷೇತ್ರವು ತುಸು ಸುಧಾರಿಸಿಕೊಂಡಿದೆ. ಅಲ್ಲದೆ ಸಿಬ್ಬಂದಿಗಳ ಅವಿರತ  ಮಾನವೀಯ ಸೇವೆಗಳು ಉಲ್ಲೇಖನೀಯ ಸಂಗತಿ.

ಧ್ವನಿ ಫೌಂಡೇಶನ್ ಬೆಂಗಳೂರು ಇವರಿಂದಾಗಿ ನಾವು ಸ್ಪಷ್ಟ ಮತ್ತು ನಿರಂತರತೆಯತ್ತ ಸಾಗುತ್ತಿದ್ದೇವೆ. ಎಲ್ಐಸಿ ಗೋಲ್ಡನ್ ಜುಬಿಲಿ ಫೌಂಡೇಶನ್ ಇವರ ಸೋಲಾರ್ ಘಟಕದ ಸಹಾಯ ಹಸ್ತ ನಮ್ಮನ್ನು ವಿದ್ಯುತ್ ಕ್ಷೇತ್ರದಲ್ಲಿ ಸ್ವಾವಲಂಬಿಯನ್ನಾಗಿಸಿದೆ. ಎ.ಸಿ.ಇ. ಮ್ಯಾನಿಫ್ಯಾಕ್ಚರಿಂಗ್ ಸಿಸ್ಟಮ್ಸ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು ಇವರು ನಮಗೂ ಒದಗಿಸಿದ್ದ ಸಹಾಯಹಸ್ತಕ್ಕೆ ನಾವು ಚಿರಋಣಿಗಳು. ಪ್ರಾರಂಭ ದಿನಗಳಿಂದ ಈಗಿನ ತನಕವೂ ನಮ್ಮ ಹಿರಿಯಣ್ಣನಂತೆ ಬೆನ್ನ ಹಿಂದಿರುವುದು ಬೆಂಗಳೂರು ಎ.ಪಿ.ಡಿ. ಸಂಸ್ಥೆಗಳಿಗೆ ನಾವು ಚಿರಋಣಿಗಳು. ಸೆಲ್ಕೋ ಫೌಂಡೇಶನ್ ನಮ್ಮೊಂದಿಗಿರುವುದು ಧನ್ಯತೆ ತಂದಿರುತ್ತದೆ.

ಜಗತ್ತಿಗೆ ಬಾಧಿಸಿದ ಕೊರೊನಾದಿಂದ ಮೈಕೊಡವಿ ಎದ್ದೇಳುತ್ತಿದ್ದೇವೆ. ತಮ್ಮೆಲ್ಲರ ಸಹಾಯಹಸ್ತ ಮತ್ತು ವಿಶ್ವಾಸ ತುಂಬಿದ ನುಡಿಗಳಿಂದಾಗಿ ಮೊದಲಿನಂತಲ್ಲದಿದ್ದರೂ ಆಮೆ ನಡಿಗೆಗೆ ಸಾಧ್ಯವಾಗಿರುವುದು ಅಭಿಮಾನದ ಸಂಗತಿ.

ಕೊರೋನಾ ಸಮಯದಲ್ಲಿ ಬೆನ್ನುಮೂಳೆ ಮುರಿತಗೊಂಡವರಿಗೆ ನಮ್ಮ ಶಾಸಕರು, ರೋಟರಿ ಕ್ಲಬ್‌ಗಳು, ಸಮರ್ಥನಂ ಸಂಸ್ಥೆ ಬೆಂಗಳೂರು, ಎ.ಪಿ.ಡಿ. ಸಂಸ್ಥೆ ಬೆಂಗಳೂರು ಇವರು ದಿನಸಿ ಕಿಟ್ ಹಾಗೂ ಮೆಡಿಕಲ್ ಕಿಟ್‌ಗಳನ್ನು ನೀಡಿರುವುದು ಮಾನವೀಯತೆಗೆ ಸಿಕ್ಕ ಜಯವಾಗಿದೆ.

ಇನ್ನು ಉಚಿತ ಟೈಲರಿಂಗ್ ತರಬೇತಿಗಳು ಪ್ರಸ್ತುತ ಪುನರ್ ಆರಂಭಗೊಂಡಿದ್ದು ರಕ್ತದಾನ ಶಿಬಿರಗಳ ಆಯೋಜನೆ ಮತ್ತು ಆಂಬುಲೆನ್ಸ್ ಸೇವೆಗಳು ಹಳೆಗೆ ಬಂದಿರುತ್ತದೆ.

ಒಟ್ಟಿನಲ್ಲಿ ಸಮಾಜ ಶಕ್ತಿವಂತವಾಗಬೇಕು. ಹಾಗೆ ಆಗಬೇಕಾದಲ್ಲಿ ಪ್ರತಿ ವ್ಯಕ್ತಿ ಶಕ್ತಿವಂತನಾಗಬೇಕು. ಆ ನಿಟ್ಟಿನಲ್ಲಿ ನಮ್ಮ ಸೇವೆಗಳು ಅನುಷ್ಠಾನವಾಗುತ್ತದೆ. ಸೇವಾ ಹಿ ಪರಮೋ ಧರ್ಮಃ ಎನ್ನುವ ಉಕ್ತಿ ಸಮರ್ಥಕವಾಗುತ್ತದೆ.

ಮೊದಲಿನಂತೆಯೇ ತಮ್ಮ ಸಹಕಾರವಿರಲಿ.

ಇಂತೀ ತಮ್ಮವ

ಕೆ. ವಿನಾಯಕ ರಾವ್

SEVA BHARATHI
सेवा ही परमो धर्मः

# ಸೇವಾಭಾರತಿ (ರಿ.), ಬೆಳ್ತಂಗಡಿ ತಾಲೂಕು

ಪ್ರಧಾನ ಕಾರ್ಯಾಲಯ: 'ಸೇವಾನಿಕೇತನ', ಕನ್ಯಾಡಿ - II, ಧರ್ಮಸ್ಥಳ ಗ್ರಾಮ
ಮೊ: 9945491241

ನಮ್ಮ ಸಂಸ್ಥೆಯ

# 16ನೇ ವರ್ಷದ ವಾರ್ಷಿಕೋತ್ಸವ

## ಮತ್ತು ಸೇವಾಕಾರ್ಯಗಳ ಲೋಕಾರ್ಪಣೆ

## ಸೇವಾಧಾಮಕ್ಕೆ ಸಂಸ್ಥೆಗಳಿಂದ ಕೊಡುಗೆಗಳ ಸ್ವೀಕಾರ ಹಾಗೂ ಸೇವಾಧಾಮದಲ್ಲಿ ಆಕ್ಯುಪ್ರೆಶರ್ ಸೇವೆಗೆ ಚಾಲನೆ ಮತ್ತು ಶಾಸಕರಿಗೆ ಸನ್ಮಾನ ಸಮಾರಂಭ

**ದಿನಾಂಕ: 14-03-2021 ರವಿವಾರ, ಪೂರ್ವಾಹ್ನ 11-00 ಗಂಟೆಗೆ**
**ಸ್ಥಳ: ಶಾಲಾ ಸಭಾಭವನ, ಹಿರಿಯ ಪ್ರಾಥಮಿಕ ಶಾಲೆ, ಕನ್ಯಾಡಿ**

ಉದ್ಘಾಟಕರು : **ಶ್ರೀ ಪ್ರಭಾಕರ್ ಹೆಗ್ಡೆ,** ಉದ್ಯಮಿಗಳು, ಉಜಿರೆ

ಅಧ್ಯಕ್ಷತೆ : **ಶ್ರೀ ಕೆ. ವಿನಾಯಕ ರಾವ್,** ಅಧ್ಯಕ್ಷರು, ಸೇವಾಭಾರತಿ (ರಿ.), ಕನ್ಯಾಡಿ, ಬೆಳ್ತಂಗಡಿ ತಾಲೂಕು

ಯೋಜನೆಗಳ ಹಸ್ತಾಂತರ : **ಶ್ರೀ ಕೆ.ಎಸ್. ಮಂಜುನಾಥ್,** ಸಂಸ್ಥಾಪಕರು ಹಾಗೂ ಅಧ್ಯಕ್ಷರು ನವಚೇತನ ಚಾರಿಟೇಬಲ್ ಟ್ರಸ್ಟ್ (ರಿ.), ರಾಮನಗರ
**ಶ್ರೀ ವೆಂಕಟ ರಾಮಕೃಷ್ಣ ನೆಕ್ಕಿನ,** ಸಿ.ಇ.ಒ., ಎ.ಪಿ.ಡಿ., ಬೆಂಗಳೂರು
**ಶ್ರೀ ಗುರುಪ್ರಕಾಶ್ ಶೆಟ್ಟಿ,** ಡಿ.ಜಿ.ಎಂ. ಸೆಲ್ಕೋ ಲಿಮಿಟೆಡ್, ಉಡುಪಿ
**ಶ್ರೀ ಆಶಿತ್ ಕಲ್ಲಾಜೆ,** ಯುವ ತೇಜಸ್ಸು ಟ್ರಸ್ಟ್ (ರಿ.), ಸುಳ್ಯ

ಅತಿಥಿಗಳು : **ಶ್ರೀ ರೋಷನ್ ಬೆಳ್ಮಣ್ಣು,** ಸಂಸ್ಥಾಪಕರು, ಹ್ಯುಮಾನಿಟಿ ಟ್ರಸ್ಟ್, ಬೆಳ್ಮಣ್ಣು
**ಶ್ರೀ ವಿಜಯ ಕೊಡವೂರು,** ಸಮಾಜಸೇವಕರು, ಉಡುಪಿ

ಉಪಸ್ಥಿತಿ : **ಶ್ರೀ ಕೆ. ಕೃಷ್ಣ ಭಟ್,** ಅಧ್ಯಕ್ಷರು, ಸೌತಡ್ಕ ಶ್ರೀ ಮಹಾಗಣಪತಿ ಸೇವಾ ಟ್ರಸ್ಟ್ (ರಿ.), ಕೊಕ್ಕಡ
**ಶ್ರೀ ಕೆ. ಪುರಂದರ ರಾವ್,** ಸಂಚಾಲಕರು, ಸೇವಾಧಾಮ, ಸೌತಡ್ಕ
**ಶ್ರೀಮತಿ ಶಾಂತ ಪಿ. ಶೆಟ್ಟಿ,** ಅಧ್ಯಕ್ಷರು, ಶ್ರೀ ದುರ್ಗಾ ಮಾತೃ ಮಂಡಳಿ
**ಶ್ರೀ ಕೆ. ವಿ. ಶ್ರೀಧರ್,** ಅಧ್ಯಕ್ಷರು, ಆರೋಗ್ಯಭಾರತಿ
**ಶ್ರೀ ಸೂರ್ಯಪ್ರಕಾಶ್ ಎಂ.,** ಅಧ್ಯಕ್ಷರು, ಶಾಲಾ ಮೇಲುಸ್ತುವಾರಿ ಸಮಿತಿ, ಕನ್ಯಾಡಿ

ಗೌರವಾರ್ಪಣೆ
**ಶ್ರೀ ಹರೀಶ್ ಪೂಂಜಾ,** ಮಾನ್ಯಶಾಸಕರು, ಬೆಳ್ತಂಗಡಿ ತಾಲೂಕು

**ತಮ್ಮೆಲ್ಲರನ್ನೂ ಹಾರ್ದಿಕವಾಗಿ ಸ್ವಾಗತಿಸುವ**

| ಸ್ವರ್ಣಗೌರಿ | ಬಿ. ಕೃಷ್ಣಪ್ಪ ಗುಡಿಗಾರ್ | ಕೆ. ವಿನಾಯಕ ರಾವ್ |
|---|---|---|
| ಕಾರ್ಯದರ್ಶಿ | ಖಜಾಂಚಿ | ಅಧ್ಯಕ್ಷರು |

**ಹಾಗೂ ಟ್ರಸ್ಟಿಗಳು, ಸಲಹಾ ಮಂಡಳಿ ಮತ್ತು ವಿಭಾಗಗಳ ಸರ್ವ ಸದಸ್ಯರು**
**ಹಾಗೂ ಸಂಸ್ಥೆಯ ಪೋಷಕರ ಸವಿನಯ ಆಮಂತ್ರಣ**

## ಪದಾಧಿಕಾರಿಗಳು 2019–20

| ಕ್ರ.ಸಂ. | ಹೆಸರು | ಹುದ್ದೆ | ಸಂಪರ್ಕ ಸಂಖ್ಯೆ |
|---|---|---|---|
| 1 | ಶ್ರೀ ಕೆ. ವಿನಾಯಕ ರಾವ್ | ಅಧ್ಯಕ್ಷರು | 9844092350 |
| 2 | ಶ್ರೀ ಕೆ ಯು. ಗಿರೀಶ್ ರಾವ್ | ಉಪಾಧ್ಯಕ್ಷರು | 9845220411 |
| 3 | ಶ್ರೀಮತಿ ಸ್ವರ್ಣಗೌರಿ | ಕಾರ್ಯದರ್ಶಿ | 9449334114 |
| 4 | ಶ್ರೀ ಮುರಳೀಧರ್ ದಾಸ್ | ಜೊತೆ ಕಾರ್ಯದರ್ಶಿ | 9480293111 |
| 5 | ಶ್ರೀ ಡಿ. ಮಹೇಶ್ | ಖಜಾಂಚಿ | 8277773799 |
| 6 | ಶ್ರೀ ಕೆ. ಕುಸುಮಾಕರ ಗೌಡ | ಟ್ರಸ್ಟಿ | 9844274027 |
| 7 | ಶ್ರೀ ರಜತ್ ಕುಮಾರ್ ಜೆ. ಡಿ. | ಟ್ರಸ್ಟಿ | 9611004241 |
| 8 | ಶ್ರೀ ಬಿ. ಕೃಷ್ಣಪ್ಪ ಗುಡಿಗಾರ್ | ಟ್ರಸ್ಟಿ | 9980881812 |

## ಸೇವಾಧಾಮದ ಪ್ರಮುಖರು

| ಕ್ರ.ಸಂ. | ಹೆಸರು | ಜವಾಬ್ದಾರಿ | ಸಂಪರ್ಕ ಸಂಖ್ಯೆ |
|---|---|---|---|
| 1 | ಶ್ರೀ ಕೆ. ಪುರಂದರ ರಾವ್ | ಸಂಚಾಲಕರು | 9880468649 |
| 2 | ಡಾ. ಮುರಲೀಧರ್ ದಾಸ್ | ನಿರ್ದೇಶಕರು | 9880447350 |
| 3 | ಶ್ರೀ ರಾಯನ್ ಫೆರ್ನಾಂಡೀಸ್ | ನಿರ್ದೇಶಕರು | 9535621217 |
| 4 | ಶ್ರೀ ವಿಜಯ ಕೊಡವೂರು | ನಿರ್ದೇಶಕರು | 9844613195 |
| 5 | ಶ್ರೀ ಬಾಲಕೃಷ್ಣ | ಮಾರ್ಗದರ್ಶಿ | 9480036333 |

## ಆರೋಗ್ಯ ಭಾರತಿ

| ಕ್ರ.ಸಂ. | ಹೆಸರು | ಜವಾಬ್ದಾರಿ | ಸಂಪರ್ಕ ಸಂಖ್ಯೆ |
|---|---|---|---|
| 1 | ಶ್ರೀ ಶ್ರೀಧರ್ ಕೆ.ವಿ. | ಅಧ್ಯಕ್ಷರು | 8971897193 |
| 2 | ಶ್ರೀ ನವೀನ್ ಕುಮಾರ್ ಕನ್ಯಾಡಿ | ಕಾರ್ಯದರ್ಶಿ | 9743308682 |

## ಶ್ರೀದುರ್ಗಾ ಮಾತೃ ಮಂಡಳಿ

| ಕ್ರ.ಸಂ. | ಹೆಸರು | ಜವಾಬ್ದಾರಿ | ಸಂಪರ್ಕ ಸಂಖ್ಯೆ |
|---|---|---|---|
| 1 | ಶ್ರೀಮತಿ ಶಾಂತ ಪಿ. ಶೆಟ್ಟಿ | ಅಧ್ಯಕ್ಷರು | 9945427542 |
| 2 | ಶ್ರೀಮತಿ ಪೂರ್ಣಿಮ | ಕಾರ್ಯದರ್ಶಿ | 9008001727 |
| 3 | ಶ್ರೀಮತಿ ಬಬಿತಾ | ಖಜಾಂಚಿ | 9480763296 |

## ನಮ್ಮ ಈಗಿನ ಸಿಬ್ಬಂದಿ ವರ್ಗ

| ಕ್ರ.ಸಂ. | ಹೆಸರು | ಹುದ್ದೆ | ಸಂಪರ್ಕ ಸಂಖ್ಯೆ |
|---|---|---|---|
| 1 | ಶ್ರೀ ಮೋಹನ್ ಎಸ್. | ಕಾರ್ಯಾಲಯ ಪ್ರಬಂಧಕರು | 9945491241 |
| 2 | ಶ್ರೀ ಅಖಿಲೇಶ್ ಎ. | ಕಾರ್ಯಕ್ರಮ ಸಂಯೋಜಕರು | 9606044891 |
| 3 | ಶ್ರೀ ಚರಣ್ ಕುಮಾರ್ ಎಮ್. | ಧನ ಸಂಗ್ರಹಕರು | 9606044892 |
| 4 | ಶ್ರೀ ಅದಿನ್ ಡೇವಿಡ್ | ಫಿಸಿಯೋಥೆರಪಿಸ್ಟ್ | 9606044890 |
| 5 | ಶ್ರೀ ಆಶ್ರಿತ್ ಸಿ. ಪಿ. | ಮೇಲ್ವಿಚಾರಕರು | 9448254888 |
| 6 | ಶ್ರೀ ಧನೇಂದ್ರ | ಸಹಾಯಕ ಥೆರಪಿಸ್ಟ್ | 9606044894 |
| 7 | ಶ್ರೀ ಸತೀಶ್ | ಅಡುಗೆ ತಯಾರಕರು | 9483997066 |
| 8 | ಶ್ರೀಮತಿ ರಾಜೀವಿ | ಸ್ವಚ್ಛತೆ | |

## ಸೇವಾಭಾರತಿ ಸಲಹಾ ಸಮಿತಿ ಸದಸ್ಯರುಗಳು

| ಕ್ರ. ಸಂ. | ಹೆಸರು | ಸಂಪರ್ಕ ಸಂಖ್ಯೆ |
|---|---|---|
| 1 | ಶ್ರೀ ಪ್ರತಾಪ್‌ಸಿಂಹ ನಾಯಕ್ | 9448466237 |
| 2 | ಶ್ರೀ ಗುಜ್ಜಾಡಿ ಪ್ರಭಾಕರ್ ನಾಯಕ್ | 9845010220 |
| 3 | ಶ್ರೀಮತಿ ಮನೋರಮ ಭಟ್ | 9448770501 |
| 4 | ಶ್ರೀಮತಿ ಡಾ. ದೀಪಾಲಿ ಡೋಂಗ್ರೆ | 9448437952 |
| 5 | ಶ್ರೀ ರಾಘವೇಂದ್ರ ಬರ್ಗುಳ | 9481023990 |
| 6 | ಶ್ರೀ ಹರೀಶ್ ಟಿ. ಪಿ. | 9243199905 |
| 7 | ಶ್ರೀ ಗೋಪಾಲಕೃಷ್ಣಯ್ಯ ವಿಜಯಪುರಿ | 9900520024 |

# ಸೇವಾಭಾರತಿ (ರಿ.) ಬೆಳ್ತಂಗಡಿ ತಾ॥ ಗ್ರಾಮ ಸಂಯೋಜಕರ ವಿವರ

| ಕ್ರ. ಸ. | ಗ್ರಾಮ ಪಂಚಾಯತ್ | ಸಂಯೋಜಕರು | ಸಂಪರ್ಕ ಸಂಖ್ಯೆ |
|---|---|---|---|
| 1. | ನೆರಿಯಾ | ಚಿದಾನಂದ ಕೆ. ಆರ್. | 9611923952 |
| 2. | ಧರ್ಮಸ್ಥಳ | ಪುರುಷೋತ್ತಮ ಪೂಜಾರಿ | 9448724635 |
| 3. | ಪಟ್ರಮೆ | ಜಿನ್ನಪ್ಪ ಗೌಡ | 9483564714 |
| 4. | ಕೊಕ್ಕಡ | ಮೋಹನ ಗೌಡ | 9449566501 |
| 5. | ಶಿಬಾಜೆ | ಗಿರೀಶ್ ಭಟ್ ಬಿ. | 9480300272 |
| 6. | ಶಿಶಿಲ | ಸೂರ್ಯನಾರಾಯಣ ರಾವ್ | 8762281125 |
| 7. | ಹತ್ಯಡ್ಕ | ಸುಬ್ರಹ್ಮಣ್ಯ ಡಿ. | 9483139824 |
| 8. | ಕಳೆಂಜ | ಅಶೋಕ ಗೌಡ | 9739790285 |
| 9. | ನಿಡ್ಲೆ | ಕೆ. ರಾಮಚಂದ್ರ ರಾವ್ | 9741752122 |
| 10. | ಪುದುವೆಟ್ಟು | ಗಣೇಶ್ | 9902508977 |
| 11. | ರೆಖ್ಯಾ | ಪ್ರಕಾಶ ಎಂಜಿರ | 9449902721 |
| 12. | ಬೆಳಾಲು | ಯಶವಂತ ಬಿ. ಡಿ. | 9902338898 |
| 13. | ಕಲ್ಮಂಜ | ರಾಜಶೇಖರ ಹೆಬ್ಬಾರ್ | 9731412725 |
| 14. | ಮುಂಡಾಜೆ | ನಾರಾಯಣ ಫಡ್ಕೆ | 9632303163 |
| | | ಎನ್. ಎಸ್. ಗೋಖಲೆ | 9448624556 |
| 15. | ಚಾರ್ಮಾಡಿ | ಹರೀಶ್ ರಾವ್ | 9480146723 |
| 16. | ತೋಟತ್ತಾಡಿ | ಜನಾರ್ಧನ ಗೌಡ | 9880294755 |
| 17. | ಚಿಬಿದ್ರೆ | ಗೋಪಾಲಕೃಷ್ಣ ಭಟ್ | 9611728884 |
| 18. | ಕಡಿರುದ್ಯಾವರ | ವಿನಾಯಕ ಪ್ರಭು | 9449467737 |
| 19. | ಮಿತ್ತಬಾಗಿಲು | ಶಿವಾನಂದ ರಾವ್ | 9481266707 |
| 20. | ಮಲವಂತಿಗೆ | ಡಿ. ದಿನೇಶ್ | 9880183173 |

| | | | |
|---|---|---|---|
| 21. | ಉಜಿರೆ | ಗೋಪಾಲಕೃಷ್ಣ ಜಿ. ಕೆ. | 9449389869 |
| 22. | ಕನ್ಯಾಡಿ । | ಜಯ ಶೆಟ್ಟಿ | 9632550673 |
| 23. | ನಡ | ಅಜಿತ್ ಕುಮಾರ್ ಆರಿಗ | 9972990442 |
| 24. | ಲ್ಯಾಲ | ಗಿರೀಶ್ ಡೋಂಗ್ರೆ | 9449386004 |
| 25. | ಇಂದಬೆಟ್ಟು | ಆನಂದ ಹಡೀಲು | 9740734728 |
| 26. | ನಾವೂರು | ಹರೀಶ್ ಬಂಗೇರ | 8971144502 |
| 27. | ಬಂದಾರು | ಉದಯಕುಮಾರ್ ಬಿ. ಕೆ. | 9972725301 |
| 28. | ಪುತ್ತಿಲ | ಗಣೇಶ್ ಪಿ. | 9740936607 |
| 29. | ತಣ್ಣೀರುಪಂತ | ಶಿವರಾಮ ಶೆಟ್ಟಿಗಾರ್ | 9741636158 |
| 30. | ಕಣಿಯೂರು | ಪುರಂದರ ಶೆಟ್ಟಿ | 9482110371 |
| 31. | ತೆಕ್ಕಾರು | ಗಿರಿಧರ ನಾಯಕ್ | 9480289522 |
| 32. | ಉರುವಾಲು | ಸೀತಾರಾಮ ಆಳ್ವ | 9448061006 |
| 33. | ಮಚ್ಚಿನ | ಪದ್ಮನಾಭ ಸಾಲ್ಯಾನ್ | 9481225736 |
| 34. | ಬಡಕೋಡಿ | ಸೇಸಪ್ಪ ನಾಯ್ಕ | 9611874540 |
| 35. | ಮೂಡುಕೋಡಿ | ಹರೀಶ್ ಪಿ. ಎಸ್. | 9480571959 |
| 36. | ಬಜಿರೆ | ಶ್ರೀಮತಿ ಹೇಮಾ | 9448203205 |
| 37. | ಕರಿಮಣೇಲು | ಕೃಷ್ಣಪ್ಪ | 9449467718 |
| 38. | ವೇಣೂರು | ನೇಮಣ್ಣ | 9449210373 |
| 39. | ಹೊಸಂಗಡಿ | ಸುನೀಲ್ ಶೆಟ್ಟಿ | 9535617848 |
| 40. | ಮರೋಡಿ | ಜಯರಾಮ | 9741461784 |
| | | ಯಶೋಧರ ಬಂಗೇರ ಪಿ. | 7090834744 |
| 41. | ಅರಂಬೋಡಿ | ಪ್ರಣೀತ್ | 9611815441 |
| | | ಸತೀಶ ಮಠ ಪಿ. | 990110205 |

| | | | |
|---|---|---|---|
| 42. | ಪೆರಾಡಿ | ಬಾಬಣ್ಣ ಕುಲಾಲ್ | 9449387425 |
| 43. | ಸಾವ್ಯ | ಹರೀಶ್ ಹೆಗ್ಡೆ | 9483034349 |
| 44. | ಕಾಶಿಪಟ್ಣ | ನಿತೇಶ್ ಸಾಲಿಯಾನ್ | 9880208745 |
| 45. | ಕರಾಯ | ಜಯರಾಮ ಆಚಾರ್ಯ | 9945192966 |
| 46. | ಅಂಡಿಂಜೆ | ರಾಘವನ್ ಪುತ್ರನ್ | 9448251431 |
| 47. | ಮೊಗ್ರು | ಪುರಂಧರ ಎನ್. | 9483907157 |
| 48. | ಮಾಲಾಡಿ | ಅಶೋಕ ಕುರಿಯಾಡಿ | 9535221888 |
| 49. | ಒಡಿಲ್ನಾಳ | ತಾರಾನಾಥ | 9535343218 |
| 50. | ಗುಂಡೂರಿ | ನವೀನ್ ಪಚ್ಚೇರಿ | 9632222517 |
| 51. | ಕೊಕ್ರಾಡಿ | ಮಹೇಶ್ ಭಟ್ | 9480317061 |
| 52. | ನಾರಾವಿ | ಸುಜಲತಾ | 8277529018 |
| 53. | ನಿಟ್ಟಡೆ | ಪ್ರಕಾಶ್ ಪೆರ್ಮುಡ | 9481021054 |
| 54. | ಕುಕ್ಕೇಡಿ | ಅನಿಲ್ ಹೆಗ್ಡೆ | 9480400924 |
| 55. | ಇಳಂತಿಲ | ಜನಾರ್ದನ ಗೌಡ ಅಣಾಜೆ | 9980249676 |
| 56. | ತೆಂಕಕಾರಂದೂರು | ಯೋಗೀಶ್ ಗಿಳಿಕಾಪು | 9663691898 |
| 57. | ಶಿರ್ಲಾಲು | ಭಾಸ್ಕರ್ ಸಾಲ್ಯಾನ್ | 9449565600 |
| 58. | ಬಳಂಜ | ಜಯ ಸಾಲ್ಯಾನ್ | 9449331428 |
| 59. | ಕುತ್ಲೂರು | ರಾಮಚಂದ್ರ ಭಟ್ | 9148063602 |

## ಎಪ್ರಿಲ್–2019 ರಿಂದ ಮಾರ್ಚ್ 2020ರಲ್ಲಿ ನಡೆದ ಕಾರ್ಯಕ್ರಮಗಳ ವಿವರ

# ಸೇವಾಭಾರತಿ

## ಸೇವಾಭಾರತಿಗೆ ಜಿಲ್ಲಾ ಕನ್ನಡ ರಾಜ್ಯೋತ್ಸವ ಪ್ರಶಸ್ತಿ 2019



ದಿನಾಂಕ 26.01.2020ರಂದು ಮಂಗಳೂರಿನ ನೆಹರು ಮೈದಾನದಲ್ಲಿ ನಡೆದ 2020ನೇ ಗಣರಾಜ್ಯೋತ್ಸವ ಸಂದರ್ಭದಲ್ಲಿ ಸೇವಾಭಾರತಿ (ರಿ.), ಕನ್ಯಾಡಿ–II ನಮ್ಮ ಸಂಸ್ಥೆಗೆ ಕರ್ನಾಟಕ ಸರಕಾರದಿಂದ 'ಸಮಾಜಸೇವೆ ಸಂಘ ಸಂಸ್ಥೆ' ಕ್ಷೇತ್ರದಲ್ಲಿ ಮಾಡಿದ ಅನುಪಮ ಸಾಧನೆಯನ್ನು ಗುರುತಿಸಿ 'ದಕ್ಷಿಣ ಕನ್ನಡ ಜಿಲ್ಲಾ ಕನ್ನಡ ರಾಜ್ಯೋತ್ಸವ ಪ್ರಶಸ್ತಿ 2019' ನೀಡಿ ಗೌರವಿಸಿದೆ. ಈ ಸಂದರ್ಭದಲ್ಲಿ ಅಧ್ಯಕ್ಷರಾದ ಕೆ. ವಿನಾಯಕ ರಾವ್, ಕಾರ್ಯದರ್ಶಿ ಶ್ರೀಮತಿ ಸ್ವರ್ಣಗೌರಿ, ಟ್ರಸ್ಟಿ ಕುಸುಮಾಕರ್ ಗೌಡ, ಪ್ರಬಂಧಕರಾದ ಮೋಹನ್ ಎಸ್., ಯಕ್ಷಭಾರತಿ ಅಧ್ಯಕ್ಷರಾದ ದಯಾನಂದ ಯಳಚಿತ್ತಾಯ, ಕಾರ್ಯಕರ್ತರಾದ ಕೇಶವ ಎಂ., ಮಂಜುನಾಥ್ ದಾವಣಗೆರೆ ಹಾಗೂ ಶ್ರೀಮತಿ ರೇಷ್ಮಾ ಉಪಸ್ಥಿತರಿದ್ದರು.

## ಸೇವಾಧಾಮಕ್ಕೆ ಉತ್ತಿಷ್ಟ ಸೇವಾ ಪುರಸ್ಕಾರ – 2020 ಪ್ರದಾನ

**ಉಜಿರೆ :** ಬೆನ್ನುಮೂಳೆ ಮುರಿತಕ್ಕೊಳಗಾದವರ ಪುನಃಶ್ಚೇತನ ಕೇಂದ್ರ ಸೇವಾಧಾಮ ಸೌತಡ್ಕದ ಉತ್ತಮ ಸಮಾಜ ಸೇವೆಯನು ಗುರುತಿಸಿ ಸೇವಾಭಾರತಿ ಕನ್ಯಾಡಿಯ ಅಂಗಸಂಸ್ಥೆಗೆ ಬೆಂಗಳೂರಿನ ಉತ್ತಿಷ್ಟ ಫೌಂಡೇಶನ್ ಫೆ. 23ರಂದು ಇಂದಿರಾನಗರದ



ಸಂಗೀತ ಸಭಾಭಾವನದಲ್ಲಿ ನಡೆದ ಉತ್ತಿಷ್ಠ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಸೇವಾಭಾರತಿ ಅಧ್ಯಕ್ಷರು ಹಾಗೂ ಸೇವಾಧಾಮ ಸಂಸ್ಥಾಪಕರು ಹಾಗೂ ನಿರ್ದೇಶಕರುಗಳು ಉಪಸ್ಥಿತರಿದ್ದರು. ಸಂಸ್ಥೆಗೆ ರೂ ಒಂದು ಲಕ್ಷ ಮೊತ್ತದ ದತ್ತಿನಿಧಿ ಸಹಿತ ಪ್ರಶಸ್ತಿ ಫಲಕವನ್ನು ಸ್ವೀಕರಿಸಲಾಯಿತು. ಇಸ್ರೋ ಅಧ್ಯಕ್ಷರಾದ ಡಾ. ಕೆ. ಶಿವನ್ ಸೇವಾ ಧಾಮದ ನಿರ್ದೇಶಕ ರಾಯನ್ ಫೆರ್ನಾಂಡಿಸ್, ಶ್ರೀ ಮಹಾಗಣಪತಿ ಸೇವಾ ಟ್ರಸ್ಟ್ ಅಧ್ಯಕ್ಷ ಕೃಷ್ಣ ಭಟ್, ಸಕ್ಷಮದ ಚಂದನ್ ಗುಡಿಗಾರ್, ಶ್ರೀ ದುರ್ಗಾ ಮಾತೃಮಂಡಳಿಯ ಅಧ್ಯಕ್ಷೆ ಕೆ. ವಸಂತಿ, ಸೇವಾಧಾಮ ಟ್ರಸ್ಟಿ ರಜತ್ ಮೊದಲಾದವರು ಉಪಸ್ಥಿತರಿದ್ದರು.

ದಿನಾಂಕ 05.04.2019ರಂದು ನಮ್ಮ ಸಂಸ್ಥೆಯ ತಂಡವು ಬಜಪೆ ಪ್ರಾಥಮಿಕ ಕೃಷಿಪತ್ತಿನ ಸೇವಾ ಸಹಕಾರ ಸಂಘ ಮತ್ತು ಮೂಡುಬಿದ್ರೆಯ ಸ್ಫೂರ್ತಿ ಭಿನ್ನ ಸಾಮರ್ಥ್ಯದ ಮಕ್ಕಳ ಶಾಲೆಗೆ ಭೇಟಿ ನೀಡಿತು. ಈ ಸಂದರ್ಭದಲ್ಲಿ ಸೇವಾಭಾರತಿಯ ಅಧ್ಯಕ್ಷರಾದ ಶ್ರೀ ಕೆ. ವಿನಾಯಕ ರಾವ್ ಮತ್ತು ಸದಸ್ಯರಾದ ಶ್ರೀ ಜಯರಾಮ್ ಭಂಡಾರಿ ಉಪಸ್ಥಿತರಿದ್ದರು.

ದಿನಾಂಕ 07.04.2019ರಂದು ಉಜಿರೆ ಶ್ರೀ ಶಾರದ ಮಂಟಪದಲ್ಲಿ ಉಜಿರೆ ವಲಯದ ಉಪ್ಪಿನಂಗಡಿ ಹವ್ಯಕ ಮಂಡಲ ಇದರ ನೇತೃತ್ವದಲ್ಲಿ ಸೇವಾಭಾರತಿ ಕನ್ಯಾಡಿ ಸಂಯೋಜನೆಯಲ್ಲಿ ಮತ್ತು ವಿವಿಧ ಸಂಘ-ಸಂಸ್ಥೆಗಳ ಸಹಯೋಗದೊಂದಿಗೆ ಹಾಗೂ ಮಂಗಳೂರಿನ ಎ.ಜೆ ಆಸ್ಪತ್ರೆ ಬ್ಲಡ್ ಬ್ಯಾಂಕ್ ನೇತೃತ್ವದಲ್ಲಿ ಬೃಹತ್ ರಕ್ತದಾನ ಶಿಬಿರ ಏರ್ಪಡಿಸಲಾಯಿತು. ಈ ರಕ್ತದಾನ ಶಿಬಿರದಲ್ಲಿ 88 ಯುನಿಟ್ ರಕ್ತ ಸಂಗ್ರಹವಾಗಿದೆ.

ದಿನಾಂಕ 10.04.2019ರಂದು ಲೋಕಕಲ್ಯಾಣಾರ್ಥವಾಗಿ ಬೆಳ್ತಂಗಡಿ ತಾಲೂಕು ಸ್ಥಾನಿಕ ಸುಬ್ರಹ್ಮಣ್ಯ ಸಭಾದ ವತಿಯಿಂದ ಬೆಳ್ತಂಗಡಿಯ ಸ್ಥಾನಿಕ ಸಭಾ ವೇದಿಕೆಯಲ್ಲಿ ನಮ್ಮ ಸಂಸ್ಥೆಯ (ಸೇವಾಭಾರತಿ) ಪರವಾಗಿ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಕೆ. ವಿನಾಯಕ ರಾವ್ ಮತ್ತು ಕಾರ್ಯದರ್ಶಿಗಳಾದ ಶ್ರೀಮತಿ ಸ್ವರ್ಣಗೌರಿಯವರಿಗೆ

ಶಾಲು ಹೊದಿಸಿ ಗೌರವಿಸಲಾಯಿತು. ಸ್ಥಾನಿಕ ಸಭಾದ ವತಿಯಿಂದ ಸೇವಾಧಾಮದ ಕಾರ್ಯಚಟುವಟಿಕೆಗಳಿಗಾಗಿ ರೂ. 25000/–ಚೆಕ್ ನೀಡಿ ಪ್ರೋತ್ಸಾಹಿಸಿದರು.

ದಿನಾಂಕ 13.04.2019ರಂದು ಸೇವಾಭಾರತಿಯ ಕಾರ್ಯದರ್ಶಿಗಳಾದ ಶ್ರೀಮತಿ ಸ್ವರ್ಣಗೌರಿ ಮತ್ತು ಸೇವಾಧಾಮದ ಸಿಬ್ಬಂದಿಗಳಾದ ಶ್ರೀ ಬಾಲಕೃಷ್ಣ ಮತ್ತು ಶ್ರೀ ನವೀನ್ ಕುಮಾರ್ ಅರಸಿನಮಕ್ಕಿಯ ಬೆನ್ನುಮೂಳೆ ಮುರಿತಕ್ಕೊಳಗಾದ ಶ್ರೀ ಸುಂದರ ಮೊಗೇರ ಇವರ ಮನೆಗೆ ತೆರಳಿ ಗಾಲಿಕುರ್ಚಿ ಹಸ್ತಾಂತರಿಸಿದರು.

ದಿನಾಂಕ 22.04.2019ರಂದು ಸೇವಾಭಾರತಿಯ ಪ್ರಧಾನ ಕಛೇರಿ ಸೇವಾನಿಕೇತನಕ್ಕೆ (ಡಿ.ಎನ್.ಎ), ಬೆಂಗಳೂರು ಇದರ ಜನರಲ್ ಮ್ಯಾನೇಜರ್ ಶ್ರೀ ಗುರುರಾಜ್ ಮತ್ತು ಮ್ಯಾನೇಜರ್ ಶ್ರೀಮತಿ ರೂಪಲಕ್ಷ್ಮೀ ಭೇಟಿ ನೀಡಿದರು.

ದಿನಾಂಕ 28.04.2019 ರಂದು ಮಂಗಳೂರಿನ ಪ್ರಖ್ಯಾತ ನೇತ್ರ ತಜ್ಞರಾದ ಡಾ. ರಾಮ್ ಮೋಹನ್ ರಾವ್ ಅವರು ಸೇವಾಭಾರತಿಯ ಪ್ರಧಾನ ಕಛೇರಿ ಸೇವಾನಿಕೇತನಕ್ಕೆ ಭೇಟಿ ನೀಡಿದರು.

ದಿನಾಂಕ 05.06.2019 ರಂದು ಬೆಳ್ತಂಗಡಿ ತಾಲೂಕಿನ 3 ರೈಸ್ ಮಿಲ್‌ಗಳಿಗೆ ಸೇವಾಭಾರತಿ ತಂಡ ಭೇಟಿ ನೀಡಿತು. ಸೇವಾಭಾರತಿಯ ಅಧ್ಯಕ್ಷರಾದ ಕೆ. ವಿನಾಯಕ ರಾವ್, ಜೊತೆ ಕಾರ್ಯದರ್ಶಿ ಮುರಳೀಧರ ದಾಸ್, ಖಜಾಂಚಿ ಮಹೇಶ್ ಡಿ. ರಾವ್, ಟ್ರಸ್ಟಿಗಳಾದ ಕೆ. ಕುಸುಮಾಕರ್ ಗೌಡ, ಬಿ. ಕೃಷ್ಣಪ್ಪ ಗುಡಿಗಾರ್, ಸೇವಾಧಾಮದ ಸಂಚಾಲಕರಾದ ಪುರಂದರ ರಾವ್, ಧರಿತ್ರಿ ಕೃಷಿಕರ ಸಂಘ ಅರುಣ್ ಜೆ.ಎನ್ ರೆಬೆಲ್ಲೊ, ಧಾರಿಣಿ ತೆಂಗು ಬೆಳೆಗಾರರ ಸಂಘದ ಅಧ್ಯಕ್ಷರಾದ ರಾಜಶೇಖರ್ ಹೆಬ್ಬಾರ್, ಸೇವಾಭಾರತಿ ಪ್ರಮುಖರಾದ ಪರಮೇಶ್ವರ ಎಂ., ಕಾರ್ಯಕರ್ತರಾದ ಕೇಶವ ಎಂ. ಇವರುಗಳು ಭೇಟಿ ನೀಡಿದರು. ಭೇಟಿಯ ಫಲವಾಗಿ ಸೇವಾಧಾಮ ಕೇಂದ್ರಕ್ಕೆ ವಿನಾಯಕ ರೈಸ್ ಮಿಲ್ ಇಂಡಸ್ಟ್ರೀಸ್ ಬೆಳ್ತಂಗಡಿ ಇವರು 3 ಕ್ವಿಂಟಾಲ್ ಅಕ್ಕಿ ನೀಡಿರುತ್ತಾರೆ.

ದಿನಾಂಕ 09.10.2019 ರಂದು ಸೇವಾಭಾರತಿಯ ತಂಡ ಉಡುಪಿ ಜಿಲ್ಲಾ ಅಂಗವಿಕಲರ ಕಲ್ಯಾಣ ಅಧಿಕಾರಿ ಶ್ರೀ ಚಂದ್ರ ನಾಯಕ್‌ರವರನ್ನು ಭೇಟಿ ಮಾಡಿತು.

ದಿನಾಂಕ 01.11.2019 ರಂದು ಗುಜ್ಜಾಡಿ ಪ್ರಭಾಕರ ನಾಯಕ್ ಅವರ ತಂಡದವರಿಂದ ಸೇವಾನಿಕೇತನದಲ್ಲಿ ಲೆಕ್ಕಪತ್ರಗಳ ಪರಿಶೋಧನೆ ಮಾಡಿಸಲಾಯಿತು. ಸಂಸ್ಥೆ ಯಾವ ರೀತಿ ಕಾರ್ಯನಿರ್ವಹಿಸಬೇಕು ಹಾಗೂ ಆಡಳಿತದಲ್ಲಿ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಅವರು ಮಾಹಿತಿ ನೀಡಿದರು.

ದಿನಾಂಕ 22.11.2019 ರಂದು ಧರ್ಮಸ್ಥಳ ಲಕ್ಷದೀಪೋತ್ಸವದ ಪ್ರಯುಕ್ತ ನಡೆದ ಪಾದಯಾತ್ರಿಗಳಿಗೆ ಸೇವಾನಿಕೇತನ ಕನ್ಯಾಡಿಯಲ್ಲಿ ಪಾನಕ ವ್ಯವಸ್ಥೆಯನ್ನು ಮಾಡಲಾಯಿತು.

ದಿನಾಂಕ 27.11.2019 ರಂದು ಬೆಳ್ತಂಗಡಿ ತಾಲೂಕು ಕಾರ್ಯನಿರ್ವಹಣಾಧಿಕಾರಿ ಜಯರಾಮ್‌ರವರು ಸೇವಾನಿಕೇತನ ಕನ್ಯಾಡಿ ಹಾಗೂ ಸೇವಾಧಾಮಕ್ಕೆ ಭೇಟಿ ನೀಡಿದರು.

ದಿನಾಂಕ 23.12.2019 ರಂದು ಧ್ವನಿ ಫೌಂಡೇಶನ್‌ರವರ ನಿರಂತರ ಕಾರ್ಯಕ್ರಮಕ್ಕೆ ತಮ್ಮ ಸಂಸ್ಥೆಯನ್ನು ಸೇರ್ಪಡೆಗೊಳಿಸುವ ಬಗ್ಗೆ ಧ್ವನಿ ಫೌಂಡೇಶನ್ ಎಕ್ಸ್‌ಕ್ಯೂಟಿವ್ ಡೈರೆಕ್ಟರ್ ಗೋಪಿನಾಥ್, ಪೃಥ್ವಿಪಾಲ್ ಶೆಟ್ಟಿ ತಮ್ಮ ಸಂಸ್ಥೆಯ ಯೋಜನೆಯ ಬಗ್ಗೆ ತಿಳಿಸಿದರು. ಸಭೆಯಲ್ಲಿ ಸೇವಾಭಾರತಿ ಅಧ್ಯಕ್ಷರಾದ ಕೆ. ವಿನಾಯಕ ರಾವ್, ಕಾರ್ಯದರ್ಶಿಯಾದ ಶ್ರೀಮತಿ ಸ್ವರ್ಣಗೌರಿ, ಸೇವಾಧಾಮದ ಸಂಚಾಲಕರಾದ ಕೆ. ಪುರಂದರ ರಾವ್, ಸೇವಾಧಾಮದ ಮಾರ್ಗದರ್ಶಕರಾದ ಬಾಲಕೃಷ್ಣ, ಟ್ರಸ್ಟಿಗಳಾದ ಕೃಷ್ಣಪ್ಪ ಗುಡಿಗಾರ್, ಕುಸುಮಾಕರ್, ಮಹೇಶ್ ರಾವ್, ಸಿಬ್ಬಂದಿಗಳಾದ ಮೋಹನ್, ರಮ್ಯ, ಸುಶ್ಮಿತಾ ಭಾಗವಹಿಸಿದ್ದರು.

**ಟ್ರಸ್ಟಿಗಳ ಸಭೆ**

ದಿನಾಂಕ 04.01.2019 ರಿಂದ 03.03.2020ರ ಅವಧಿಯಲ್ಲಿ ಒಟ್ಟು 13 ಬಾರಿ ಸೇವಾಭಾರತಿ ಟ್ರಸ್ಟಿಗಳ ಸಭೆಯನ್ನು ನಡೆಸಲಾಗಿದೆ.

# ಶ್ರೀದುರ್ಗಾ ಮಾತೃ ಮಂಡಳಿ

## ಉಚಿತ ಟೈಲರಿಂಗ್ ತರಬೇತಿ

ಸೇವಾಭಾರತಿ (ರಿ.) ಕನ್ಯಾಡಿ ಇದರ ಘಟಕದ ಆಶ್ರಯದಲ್ಲಿ ಬೆಳ್ತಂಗಡಿ ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿರುವ ಮಹಿಳೆಯರಿಗೆ ಉಚಿತವಾಗಿ ಟೈಲರಿಂಗ್ ತರಬೇತಿ ನಡೆಯುತ್ತಿದೆ. ಒಟ್ಟು 24 ಉಚಿತ ಟೈಲರಿಂಗ್ ತರಬೇತಿ ಪೂರ್ಣಗೊಂಡಿರುತ್ತದೆ. ಕೊರೊನ ಹೆಮ್ಮಾರಿಯಿಂದ ತಾತ್ಕಾಲಿಕವಾಗಿ ಸ್ಥಗಿತಗೊಂಡಿದ್ದು, ಮುಂದಿನ ಹಂತದಲ್ಲಿ ಮರು ಆರಂಭಗೊಳ್ಳಲಿದೆ.

ದಿನಾಂಕ 02.10.2019 ರಂದು ಸೇವಾಭಾರತಿಯ ಘಟಕವಾದ ಶ್ರೀದುರ್ಗಾ ಮಾತೃಮಂಡಳಿ ಇವುಗಳ ಸಂಯುಕ್ತ ಆಶ್ರಯದಲ್ಲಿ 22ನೇ ಉಚಿತ ಟೈಲರಿಂಗ್ ತರಬೇತಿ



**ಉಚಿತ ಟೈಲರಿಂಗ್ ತರಬೇತಿ ಮುಂಡೂರು ಗ್ರಾಮ**

ಶಿಬಿರವು ಬಜಿರೆ ಗ್ರಾಮದಲ್ಲಿ ನಡೆಯಿತು. 13 ಮಂದಿ ಮಹಿಳಾ ಶಿಬಿರಾರ್ಥಿಗಳು ತರಬೇತಿ ಪಡೆದರು.

ದಿನಾಂಕ 15.06.2019 ರಂದು ಮುಂಡೂರು ಗ್ರಾಮದ ಅಂಗನವಾಡಿ ಕೇಂದ್ರದಲ್ಲಿ ಮಹಿಳೆಯರಿಗಾಗಿ 20ನೇ ಉಚಿತ ಟೈಲರಿಂಗ್ ಶಿಬಿರ ಪ್ರಾರಂಭಗೊಂಡಿತು. 15 ಮಂದಿ ಟೈಲರಿಂಗ್ ತರಬೇತಿ ಪಡೆದರು.

ಸೇವಾಭಾರತಿ (ರಿ.) ಕನ್ಯಾಡಿ, ಶ್ರೀ ದುರ್ಗಾ ಮಾತೃ ಮಂಡಳಿ ಕನ್ಯಾಡಿ, ರೋಟರಿ ಕ್ಲಬ್ ಬೆಳ್ತಂಗಡಿ ಇವುಗಳ ಸಂಯುಕ್ತ ಆಶ್ರಯದಲ್ಲಿ ಬೆಳ್ತಂಗಡಿ ತಾಲೂಕಿನ ಅಂಡಿಂಜೆ ಗ್ರಾಮದ ಪಂಚಾಯತ್ ಸಭಾಭವನದಲ್ಲಿ 2019 ಜೂನ್ 28ರಿಂದ ಮಹಿಳೆಯರಿಗಾಗಿ ಒಂದು ತಿಂಗಳ ಉಚಿತ ಟೈಲರಿಂಗ್ ತರಬೇತಿ ಶಿಬಿರ ನಡೆಯಿತು.

ದಿನಾಂಕ 09.08.2019 ರಂದು ಸೇವಾಭಾರತಿಯ ಘಟಕವಾದ ಶ್ರೀದುರ್ಗಾ ಮಾತೃಮಂಡಳಿ ಮತ್ತು ಸೇವಾಭಾರತಿಯ ಸಂಯುಕ್ತ ಆಶ್ರಯದಲ್ಲಿ ಶ್ರೀ ವರಮಹಾಲಕ್ಷ್ಮೀ ವ್ರತ ಪೂಜೆ ನಡೆಯಿತು.

ದಿನಾಂಕ 18.11.2019 ರಂದು ಸೇವಾಭಾರತಿಯ ಘಟಕವಾದ ಶ್ರೀ ದುರ್ಗಾ ಮಾತೃಮಂಡಳಿ ಇವುಗಳ ಸಂಯುಕ್ತ ಆಶ್ರಯದಲ್ಲಿ 23ನೇ ಉಚಿತ ಟೈಲರಿಂಗ್ ತರಬೇತಿ ಶಿಬಿರವು ಪುದುವೆಟ್ಟು ಮಿಯ್ಯಾರುವಿನಲ್ಲಿ ನಡೆಯಿತು.

## ನಿಡ್ಲೆ ಗ್ರಾಮದಲ್ಲಿ ಉಚಿತ ಟೈಲರಿಂಗ್ ತರಬೇತಿ ಶಿಬಿರ

ದಿನಾಂಕ 01.02.2020 ರಂದು ಸೇವಾಭಾರತಿ (ರಿ.) ಕನ್ಯಾಡಿ, ಶ್ರೀ ದುರ್ಗಾ ಮಾತೃ ಮಂಡಳಿ ಕನ್ಯಾಡಿ ಇವುಗಳ ಸಂಯುಕ್ತ ಆಶ್ರಯದಲ್ಲಿ ನಿಡ್ಲೆಯ ಶ್ರೀ ಮಹಾಗಣಪತಿ ಭಜನಾ ಮಂದಿರ ಬಳಿಯ ಶ್ರೀ ಮೋಹನ್ ರಾವ್ ಮನೆಯಲ್ಲಿ ಮಹಿಳೆಯರಿಗಾಗಿ ಒಂದು ತಿಂಗಳ ಉಚಿತ ಟೈಲರಿಂಗ್ ತರಬೇತಿ ಶಿಬಿರವನ್ನು ನಿವೃತ್ತ ಶಿಕ್ಷಕರಾದ ಶ್ರೀ ರಘುರಾಮ್ ಟಿ. ಉದ್ಘಾಟಿಸಿ, ಶಿಬಿರಾರ್ಥಿಗಳಿಗೆ ಶುಭ ಹಾರೈಸಿದರು. ವೇದಿಕೆಯಲ್ಲಿ ಸೇವಾಭಾರತಿ ನಿಡ್ಲೆ ಗ್ರಾಮ ಸಮಿತಿಯ ಸಂಯೋಜಕರಾದ ಶ್ರೀ ಕೆ. ರಾಮಚಂದ್ರ ರಾವ್ ಅಧ್ಯಕ್ಷತೆ ವಹಿಸಿ, ಮಹಿಳೆಯರು ಆರ್ಥಿಕವಾಗಿ ಸಬಲರಾಗುವುದರ ಜೊತೆಗೆ ಸ್ವಾವಲಂಬಿ ಬದುಕು ನಡೆಸಲು ಈ ಶಿಬಿರ ಸಹಕಾರಿಯಾಗಬಲ್ಲದು ಎಂದರು. ಮುಖ್ಯ ಅತಿಥಿಯಾಗಿ ಸೇವಾಭಾರತಿ ನಿಡ್ಲೆ ಗ್ರಾಮ ಸಮಿತಿಯ ಕಾರ್ಯಕರ್ತರಾದ ಶ್ರೀ ಕೊರಗಪ್ಪ ಗೌಡ ಬೂಡುಜಾಲು, ಶ್ರೀ ಪದ್ಮಯ್ಯ ಗೌಡ ಪಿಲಿಕಜೆ, ಮೋಹನ್ ರಾವ್ ನಿಡ್ಲೆ, ಟೈಲರಿಂಗ್ ತರಬೇತುದಾರರಾದ ಶ್ರೀಮತಿ ವಿಮಲ ಎಂ. ರಾವ್ ಇವರುಗಳು ಉಪಸ್ಥಿತರಿದ್ದರು.

ದಿನಾಂಕ 08.02.2020 ರಂದು ಸೇವಾಭಾರತಿ ಮತ್ತು ಶ್ರೀದುರ್ಗಾ ಮಾತೃ ಮಂಡಳಿಯ ಸದಸ್ಯರು ಉಡುಪಿ ಸುತ್ತಮುತ್ತಲು ಪ್ರವಾಸ ಕೈಗೊಂಡರು.

## ಸೇವಾನಿಕೇತನದಲ್ಲಿ ಆಶ್ಲೇಷಬಲಿ ಮತ್ತು ಶ್ರೀ ದುರ್ಗಾಪೂಜೆ

ದಿನಾಂಕ 10.03.2020 ರಂದು ಸೇವಾಭಾರತಿಯ ಪ್ರಧಾನ ಕಛೇರಿ ಸೇವಾನಿಕೇತನದಲ್ಲಿ ಆಶ್ಲೇಷಬಲಿ ಮತ್ತು ಶ್ರೀ ದುರ್ಗಾಪೂಜೆ ನಡೆಯಿತು.

# ಯಕ್ಷಭಾರತಿ

ದಿನಾಂಕ 09.06.2019 ರಂದು ಸೇವಾನಿಕೇತನ ಕನ್ಯಾಡಿಯಲ್ಲಿ ಯಕ್ಷಭಾರತಿಯ ಸಂಭ್ರಮೋತ್ಸವದ ಕುರಿತು ಸಮಾಲೋಚನಾ ಸಭೆ ನಡೆಯಿತು. ತಾಲೂಕಿನ ವಿವಿಧ ಭಾಗದ ಯಕ್ಷಗಾನ ಸಂಘಟನೆಯ ಪ್ರಮುಖರು, ಕಲಾಭಿಮಾನಿಗಳು, ಕಲಾವಿದರು ಉಪಸ್ಥಿತರಿದ್ದರು.

## ಯಕ್ಷಗಾನ ನಾಟ್ಯ ತರಬೇತಿ

ದಿನಾಂಕ 02.02.2020 ರಂದು ಯಕ್ಷಭಾರತಿ ಕನ್ಯಾಡಿ ಬೆಳ್ತಂಗಡಿಯ ವತಿಯಿಂದ ಆಸಕ್ತ ವಿದ್ಯಾರ್ಥಿಗಳಿಗೆ ಯಕ್ಷಗಾನ ನಾಟ್ಯ ತರಬೇತಿಯು ಕಳೆಂಜ ಗ್ರಾಮದ ಶಾಲೆತಡ್ಕದ ಸರಕಾರಿ ಉನ್ನತೀಕರಿಸಿದ ಶಾಲೆಯಲ್ಲಿ ಆರಂಭಗೊಂಡಿತು. ನಿಡ್ಲೆ ಪ್ರಾಥಮಿಕ ಕೃಷಿ



ಪತ್ತಿನ ಸಹಕಾರಿ ಸಂಘದ ನಿರ್ದೇಶಕರಾದ ಶ್ರೀ ರಮೇಶ್ ರಾವ್ ಕಾಯಡ ದೀಪ ಬೆಳಗುವ ಮೂಲಕ ಚಾಲನೆ ನೀಡಿದರು. ಶಾಲಾ ಮುಖ್ಯೋಪಾಧ್ಯಾಯಿನಿ ಶ್ರೀಮತಿ ರತ್ನ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅಭ್ಯಾಗತರಾಗಿ ಯಕ್ಷಭಾರತಿ ಕಾರ್ಯದರ್ಶಿ ಶ್ರೀ ದಿವಾಕರ ಆಚಾರ್ಯ ಗೇರುಕಟ್ಟೆ, ಸೇವಾಭಾರತಿಯ ಟ್ರಸ್ಟಿ ಶ್ರೀ ಕುಸುಮಾಕರ ಗೌಡ, ಗ್ರಾಮ ಪಂಚಾಯತ್‌ನ ಅಧ್ಯಕ್ಷರಾದ ಶ್ರೀಮತಿ ಶಾರದ, ನಾಟ್ಯ ಗುರುಗಳಾದ ಶ್ರೀ ಗಂಗಾಧರ ಕಾಯರ್ತಡ್ಕ ಉಪಸ್ಥಿತರಿದ್ದರು.

## "ಸಂಸ್ಮರಣೆ, ನುಡಿ ನಮನ ಮತ್ತು ತಾಳಮದ್ದಳೆ"

ಸೇವಾಭಾರತಿ ಬೆಳ್ತಂಗಡಿ ತಾಲೂಕು ಇದರ ಘಟಕ ಸಂಸ್ಥೆಯಾದ ಯಕ್ಷಭಾರತಿಯ ಐದನೆಯ ಸಂಭ್ರಮೋತ್ಸವದ ಅಂಗವಾಗಿ ದಿನಾಂಕ 15.02.2020 ರಂದು ಕನ್ಯಾಡಿ ಸೇವಾನಿಕೇತನದ ಸಭಾಭವನದಲ್ಲಿ ಕರ್ನಾಟಕ ಯಕ್ಷಗಾನ ಬಯಲಾಟ ಅಕಾಡೆಮಿ ಬೆಂಗಳೂರು ಇವರ ಪ್ರಾಯೋಜಕತ್ವದಲ್ಲಿ, ಯಕ್ಷಗಾನ ಕಲೆಯನ್ನು ಪ್ರೀತಿಸಿ, ಆರಾಧಿಸಿದ ಮತ್ತು ಜೀವನದ ಬಹುಸಮಯವನ್ನು ಕಲೆಯ ಬೆಳವಣಿಗೆಗೆ ವ್ಯಯಿಸಿದ ಮಹನೀಯರ




ಸಂಸ್ಮರಣೆ ಹಾಗೂ ಸಂಸ್ಥೆಯ ನಿಕಟಪೂರ್ವ ಉಪಾಧ್ಯಕ್ಷರಾಗಿದ್ದ ದಿವಂಗತ ವೆಂಕಪ್ಪ ಸುವರ್ಣರಿಗೆ ನುಡಿನಮನ ಸಮರ್ಪಣೆ ಮತ್ತು ತಾಳಮದ್ದಳೆ ನಡೆಯಿತು.

# ಆರೋಗ್ಯ ಭಾರತಿ

ಸೇವಾಭಾರತಿ ಬೆಳ್ತಂಗಡಿ ತಾಲೂಕು ಹಾಗೂ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ (ನಿ.) ಧರ್ಮಸ್ಥಳ, ಸಕ್ಷಮ ಬೆಳ್ತಂಗಡಿ ಆಶ್ರಯದಲ್ಲಿ ಎ. ಜೆ. ಆಸ್ಪತ್ರೆ ಬ್ಲಡ್ ಬ್ಯಾಂಕ್ ಮಂಗಳೂರು ಇವರ ಸಹಯೋಗದಲ್ಲಿ ಹಾಗೂ ವಿವಿಧ ಸಂಘ ಸಂಸ್ಥೆಗಳ ಸಹಕಾರದಲ್ಲಿ ದಿನಾಂಕ 18.05.2019 ರಂದು 'ಸಾಧನಾ' ಸಭಾಭವನ



ಕಲ್ಲೇರಿ ಧರ್ಮಸ್ಥಳದಲ್ಲಿ ಬೃಹತ್ ರಕ್ತದಾನ ಶಿಬಿರ ನಡೆಯಿತು. ಈ ಶಿಬಿರದಲ್ಲಿ ಒಟ್ಟು 105 ಯುನಿಟ್ ರಕ್ತ ಸಂಗ್ರಹಿಸಲಾಯಿತು.

ದಿನಾಂಕ 03.12.2019 ರಂದು ಬೃಹತ್ ರಕ್ತದಾನ ಶಿಬಿರ ಸ್ಥಳೀಯ ಸಂಘ ಸಂಸ್ಥೆಗಳ ಸಹಕಾರದಲ್ಲಿ ನಡ್ತಿಕಲ್ಲು ಮೂಡುಕೋಡಿ ಶ್ರೀ ರಾಮ ಭಜನಾ ಮಂದಿರ ಸಭಾಭವನದಲ್ಲಿ ನಡೆಯಿತು. ಶಿಬಿರದಲ್ಲಿ 73 ಯುನಿಟ್ ರಕ್ತ ಸಂಗ್ರಹಿಸಲಾಯಿತು.

ದಿನಾಂಕ 24.11.2019 ರಂದು ಪುಂಜಾಲಕಟ್ಟೆ ಪುರಿಯದಲ್ಲಿ ಸಂಘ–ಸಂಸ್ಥೆಗಳ ಸಹಯೋಗದಲ್ಲಿ ರಕ್ತದಾನ ಶಿಬಿರ ಮತ್ತು ಉಚಿತ ನೇತ್ರ ತಪಾಸಣೆ ಹಾಗೂ ಚಿಕಿತ್ಸಾ ಶಿಬಿರ ನಡೆಯಿತು. 67 ಯುನಿಟ್ ರಕ್ತ ಸಂಗ್ರಹಿಸಲಾಯಿತು. 69 ಮಂದಿಯ ಕಣ್ಣು ತಪಾಸಣೆ ನಡೆಸಲಾಯಿತು. 6 ಮಂದಿಗೆ ಉಚಿತ ಕಣ್ಣು ಚಿಕಿತ್ಸೆಗೆ ಶಿಫಾರಸ್ಸು ಮಾಡಲಾಯಿತು. 12 ಮಂದಿಗೆ ರಿಯಾಯಿತಿ ದರದಲ್ಲಿ ಕನ್ನಡಕ ನೀಡಲಾಯಿತು. 2 ಮಂದಿ ಕಣ್ಣಿನ ವಿಶೇಷ ಚಿಕಿತ್ಸೆಗೆ ಆಯ್ಕೆ ಮಾಡಲಾಯಿತು.

ದಿನಾಂಕ 13.12.2019 ರಿಂದ 15.12.2019 ರವರೆಗೆ ಬೆನ್ನುಮೂಳೆ ಮುರಿತಕ್ಕೊಳಗಾದವರಿಗೆ ಉಚಿತ ವೈದ್ಯಕೀಯ ತಪಾಸಣಾ ಶಿಬಿರ ಬೆನಕ ಮಲ್ಟಿ ಸ್ಪೆಶಾಲಿಟಿ ಹಾಸ್ಪಿಟಲ್ ಉಜಿರೆಯಲ್ಲಿ ನಡೆಯಿತು. ಬೆನಕ ಮಲ್ಟಿಸ್ಪೆಶಾಲಿಟಿ ಹಾಸ್ಪಿಟಲ್ ಆಡಳಿತ ನಿರ್ದೇಶಕ ಡಾ. ಗೋಪಾಲಕೃಷ್ಣ ಕಾರ್ಯಕ್ರಮ ಉದ್ಘಾಟಿಸಿದರು.

ದಿನಾಂಕ 15.12.2019 ರಂದು ಬೃಹತ್ ರಕ್ತದಾನ ಶಿಬಿರ ಮತ್ತು ಆಯುಷ್ಮಾನ್ ಕಾರ್ಡ್ ವಿತರಣಾ ಕಾರ್ಯಕ್ರಮವನ್ನು ಶ್ರೀ ವಿನಾಯಕ ಶ್ರೀರಾಮ ಭಜನಾ ಮಂದಿರ ಅಂಡಿಂಜೆಯಲ್ಲಿ ಕಾರ್ಯಕ್ರಮ ನಡೆಯಿತು. ವೇಣೂರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಸುಂದರ ಹೆಗ್ಡೆ ಬಿ.ಇ ಕಾರ್ಯಕ್ರಮ ಉದ್ಘಾಟಿಸಿದರು.

ದಿನಾಂಕ 15.12.2019 ರಂದು ಉಚಿತ ವೈದ್ಯಕೀಯ ತಪಸಣಾ ಶಿಬಿರದ ಸಮಾರೋಪ ಸಮಾರಂಭ ಬೆನಕ ಮಲ್ಟಿ ಸ್ಪೆಶಾಲಿಟಿ ಹಾಸ್ಪಿಟಲ್ ಉಜಿರೆಯಲ್ಲಿ ನಡೆಯಿತು. ಕಾರ್ಯಕ್ರಮದಲ್ಲಿ ಸೇವಾಭಾರತಿ ಅಧ್ಯಕ್ಷರಾದ ಕೆ. ವಿನಾಯಕ ರಾವ್, ಕಾರ್ಯದರ್ಶಿಯಾದ ಶ್ರೀಮತಿ ಸ್ವರ್ಣಗೌರಿ, ಸೇವಾಧಾಮದ ಸಂಚಾಲಕರಾದ ಕೆ. ಪುರಂದರ ರಾವ್, ಶಿರಸಿ ರಾಜೇಶ್ ನಾಯ್ಕ ವೇದಿಕೆಯಲ್ಲಿ ಉಪಸ್ಥಿತರಿದ್ದರು.

## ರಕ್ತದಾನ ಶಿಬಿರ

ದಿನಾಂಕ 01.03.2020ರಂದು ಸ.ಹಿ.ಪ್ರಾ.ಶಾಲೆ ಪಿಲಿಗೂಡು ಗ್ರಾಮದಲ್ಲಿ ರಕ್ತದಾನ ಶಿಬಿರ ನಡೆಯಿತು. ಸಮಾಜದ ಪ್ರತಿಯೊಬ್ಬರೂ ಅಶಕ್ತರಿಗೆ ಸಹಕರಿಸಿ ಕೊಡುಗೆ



ನೀಡಿದಾಗ ಸಮಾಜದಲ್ಲಿ ಪ್ರತಿಯೊಬ್ಬರೂ ಸದೃಢರಾಗಿ ಆರೋಗ್ಯವಂತ ಸಮಾಜ ನಿರ್ಮಿಸಲು ಸಾಧ್ಯ ಎಂದು ಸೇವಾಭಾರತಿ ಕನ್ಯಾಡಿಯ ಅಧ್ಯಕ್ಷರಾದ ಕೆ. ವಿನಾಯಕ ರಾವ್ ಮುಖ್ಯ ಅತಿಥಿಯಾಗಿ ಶಿಬಿರವನ್ನು ಉದ್ದೇಶಿಸಿ ಮಾತನಾಡಿದರು.

ದಿನಾಂಕ 14.06.2019 ರಂದು ಮಂಗಳೂರಿನ ಪುರಭವನದಲ್ಲಿ ಇಂಡಿಯನ್ ರೆಡ್ ಕ್ರಾಸ್ ಸೊಸೈಟಿ ದ.ಕ. ಮಂಗಳೂರು ಇದರ ವತಿಯಿಂದ ನಡೆದ ಬ್ಲಡ್ ಡೋನರ್ಸ್ ಡೇ ಆಚರಣೆ ಸಂದರ್ಭದಲ್ಲಿ ಕ್ಯಾಂಪ್ ಆರ್ಗನೈಸರ್ ನೆಲೆಯಲ್ಲಿ ನಮ್ಮ ಸಂಸ್ಥೆಯ ಪ್ರತಿನಿಧಿಯಾಗಿ ಟ್ರಸ್ಟಿಯಾದ ಶ್ರೀ ಕೆ. ಕುಸುಮಾಕರ ಗೌಡ ಸನ್ಮಾನ ಸ್ವೀಕರಿಸಿದರು.

# ಬಾಲಭಾರತಿ

ದಿನಾಂಕ 23.06.2019 ರಂದು ಸೇವಾಭಾರತಿ ಯೋಜನೆಯಾದ ಬಾಲಭಾರತಿ ಕೇಂದ್ರವು ಪೆರಾಡಿ ಗ್ರಾಮದ ಅಯ್ಯಪ್ಪ ಭಜನಾ ಮಂದಿರದಲ್ಲಿ ಪ್ರಾರಂಭಗೊಂಡಿತು.




**ಆರಂಬೋಡಿ ಗ್ರಾಮದಲ್ಲಿ ಶ್ರೀ ಗಣೇಶ ಸಭಾಭವನದಲ್ಲಿ ಆಯೋಜಿಸಲಾದ ಬಾಲಭಾರತಿ ತರಬೇತಿ**

ದಿನಾಂಕ 13.10.2019 ರಂದು ಬಾಲಸಂಸ್ಕಾರ ಕೇಂದ್ರ ಕಾನರ್ಪದ ವಿದ್ಯಾರ್ಥಿಗಳು ಹಾಗೂ ಚಿರಂಜೀವಿ ಯುವಕ ಮಂಡಲ, ಕಾನರ್ಪ ಇವರ ಸದಸ್ಯರುಗಳು ಸೇವಾಧಾಮಕ್ಕೆ ಭೇಟಿ ನೀಡಿದರು.

ದಿನಾಂಕ 27.10.2019 ರಂದು ನಿಡ್ಲೆಯಲ್ಲಿ 12ನೇ ಬಾಲಭಾರತಿ ಕೇಂದ್ರವು ಪ್ರಾರಂಭವಾಯಿತು.

ದಿನಾಂಕ 08.12.2019 ರಂದು ಬಾಲಭಾರತಿ ಶಿಕ್ಷಕಿಯರಿಗೆ ಪ್ರಶಿಕ್ಷಣವನ್ನು ಮತ್ತು 3 ಬಾಲಭಾರತಿ ಕೇಂದ್ರಗಳ (ಬಜಿರೆ, ಆರಂಬೋಡಿ, ಗುಂಡೂರಿ) ಮಕ್ಕಳಿಗೆ ಪಠ್ಯೇತರ ಚಟುವಟಿಕೆಯನ್ನು ಆರಂಬೋಡಿ ಗ್ರಾಮದ ಹನ್ನೆರಡು ಕವಲು "ಶ್ರೀ ಗಣೇಶ ಸಭಾಭವನದಲ್ಲಿ" ಆಯೋಜಿಸಲಾಯಿತು.

## ಬಾಲೋತ್ಸವ





ದಿನಾಂಕ 19.01.2020 ರಂದು ಬಾಲಭಾರತಿ ಬಾಲೋತ್ಸವ ಕಾರ್ಯಕ್ರಮ ನೆರಿಯ ಗ್ರಾಮದ ಅಪ್ಪೆಲ ಶ್ರೀ ಉಮಾಪಂಚಲಿಂಗೇಶ್ವರ ದೇವಸ್ಥಾನದಲ್ಲಿ ನಡೆಯಿತು. ಈ ಕಾರ್ಯಕ್ರಮವನ್ನು ರೊಟೇರಿಯನ್ ಸೂರಜ್ ಹೆಬ್ಬಾರ್, ನೆರಿಯ ಎಸ್ಟೇಟ್ ಇವರು ಉದ್ಘಾಟಿಸಿ ಶುಭಹಾರೈಸಿದರು. ಈ ಕಾರ್ಯಕ್ರಮದಲ್ಲಿ ವಿ.ಹಿ.ಪ. ನೆರಿಯ ಗ್ರಾಮಸಮಿತಿ ಇದರ ಅಧ್ಯಕ್ಷರಾಗಿರುವ ಸತೀಶ್ ಕುಳೆನಾಡಿ, ಕಾರ್ಯದರ್ಶಿಯಾಗಿರುವ ದಿನೇಶ್ ಕುಳೆನಾಡಿ, ಬಾಲಭಾರತಿ ಅಧ್ಯಕ್ಷರಾದ ಪರಮೇಶ್ವರ ಎಂ., ಬಾಲಭಾರತಿ ಸಂಯೋಜಕರಾದ ಗಣೇಶ್ ಶೆಂಡ್ಯೆ, ಶ್ರೀದುರ್ಗಾ ಮಾತೃ ಮಂಡಳಿ ಇದರ ಅಧ್ಯಕ್ಷರಾದ ಶ್ರೀಮತಿ ವಸಂತಿ ಗೌಡ, ಸೇವಾಭಾರತಿ ಅಧ್ಯಕ್ಷರಾದ ಕೆ. ವಿನಾಯಕ ರಾವ್, ಉಪಾಧ್ಯಕ್ಷರಾದ ಗಿರೀಶ್ ರಾವ್, ಬಾಲಭಾರತಿ ಕೇಂದ್ರದ ಶಿಕ್ಷಕಿಯಾಗಿರುವ ಜ್ಯೋತಿ ಶೆಣೈ ವೇದಿಕೆಯಲ್ಲಿ ಉಪಸ್ಥಿತರಿದ್ದರು.

# ಸೇವಾಧಾಮ

ದಿನಾಂಕ 11.06.2019 ರಂದು ಬೆನ್ನುಹುರಿ ಅಪಘಾತಕ್ಕೊಳಗಾದ ಪೆರಿಯಡ್ಕ ನಿವಾಸಿ ಸೇಸಪ್ಪ ಗೌಡರಿಗೆ ಸೇವಾಧಾಮ ಪುನಃಶ್ಚೇತನ ಕೇಂದ್ರದಿಂದ ಹೊಲಿಗೆ ಯಂತ್ರಕ್ಕೆ ಉಚಿತ ವಿದ್ಯುತ್ ಮೋಟಾರು ವಿತರಿಸಲಾಯಿತು. ಸೇವಾಭಾರತಿಯ ಅಧ್ಯಕ್ಷರಾದ ಕೆ. ವಿನಾಯಕ ರಾವ್ ಹಾಗೂ ಸೇವಾಧಾಮದ ಸಂಚಾಲಕರಾದ ಪುರಂದರ ರಾವ್, ಮ್ಯಾನೇಜರ್ ಬಾಲಕೃಷ್ಣ, ಉಪಸ್ಥಿತರಿದ್ದರು.

ದಿನಾಂಕ 28.06.2019 ರಂದು ಸೇವಾಭಾರತಿ (ರಿ.) ಬೆಳ್ತಂಗಡಿ ಹಾಗೂ ಸೇವಾಧಾಮ ನೇತೃತ್ವದಲ್ಲಿ, ಆಳ್ವಾಸ್ ಹೆಲ್ತ್ ಸೆಂಟರ್ ಸಹಕಾರದೊಂದಿಗೆ, ರೋಟರಿ ಕ್ಲಬ್ ಮೂಡಬಿದ್ರೆ, MCS ಬ್ಯಾಂಕ್ ಮೂಡಬಿದ್ರೆ, APD ಸಂಸ್ಥೆ ಬೆಂಗಳೂರು, ಮಾತೃಭೂಮಿ ಸಹಕಾರ ಸಂಘ (ನಿ.), ಮಂಗಳೂರು ಇವುಗಳ ಸಹಭಾಗಿತ್ವದಲ್ಲಿ ಬೆನ್ನುಮೂಳೆ ಮುರಿತಕ್ಕೊಳಗಾದವರಿಗೆ ಚಿಕಿತ್ಸೆ, ಸಲಹೆ ನೀಡುವ ಮೂರು ದಿನಗಳ ವೈದ್ಯಕೀಯ ತಪಾಸಣಾ ಶಿಬಿರಕ್ಕೆ ಮೂಡಬಿದ್ರೆಯ ಆಳ್ವಾಸ್ ಹೆಲ್ತ್ ಸೆಂಟರ್‌ನಲ್ಲಿ ಚಾಲನೆ ನೀಡಲಾಯಿತು.

ದಿನಾಂಕ 02.10.2019 ರಂದು ಪಕ್ಷವಾತದಿಂದ ಸಂಕಷ್ಟಕ್ಕೀಡಾದ ಶ್ರೀ ಗೋವಿಂದ ಗೌಡ ಅಡ್ಯದಕಂಡ, ಕಲ್ಮಂಜ ಇವರಿಗೆ ಉಚಿತ ಗಾಲಿಕುರ್ಚಿಯನ್ನು ನೀಡಲಾಯಿತು.

ದಿನಾಂಕ 29.10.2019 ರಂದು ಸೇವಾಧಾಮದಲ್ಲಿ ದೀಪಾವಳಿ ಆಚರಣೆ ಹಾಗೂ ಶಿಶಿಲ ಶ್ರೀ ಮಹಿಳಾ ಯಕ್ಷಗಾನ ಕಲಾತಂಡದ ಮಹಿಳಾ ಸದಸ್ಯರಿಂದ ಶ್ರೀದೇವಿ ಭ್ರಮರಾಂಬಿಕೆ ಪ್ರಸಂಗದ ಯಕ್ಷಗಾನ ತಾಳಮದ್ದಳೆ ನಡೆಯಿತು.

ದಿನಾಂಕ 11.11.2019 ರಂದು ಉನ್ನತ ಶಿಕ್ಷಣ ಸಚಿವ ಸುರೇಶ್ ಕುಮಾರ್ ರವರು ಸೇವಾಧಾಮಕ್ಕೆ ಭೇಟಿ ನೀಡಿ ವೈಯಕ್ತಿಕ ದೇಣಿಗೆಯಾಗಿ 5,000 ರೂಪಾಯಿ ನೀಡಿದರು.

ದಿನಾಂಕ 14.11.2019 ರಿಂದ 16.11.2019 ರವರೆಗೆ ಉಚಿತ ವೈದ್ಯಕೀಯ ತಪಸಣಾ ಶಿಬಿರ ಫಾದರ್ ಮುಲ್ಲರ್ ಆಸ್ಪತ್ರೆ ತುಂಬೆಯಲ್ಲಿ ನಡೆಯಿತು. ಕಾರ್ಯಕ್ರಮವನ್ನು ವಂ.ಫಾ.ಸಿಲ್ವಿಸ್ಟರ್ ವಿನ್ಸೆಂಟ್ ಲೋಬೊ ಉದ್ಘಾಟಿಸಿದರು.

## ಸೇವಾಧಾಮದ ನೂತನ ಕೈಪಿಡಿ ಬಿಡುಗಡೆ

## ಸೇವಾಧಾಮದಲ್ಲಿ ಹುಟ್ಟುಹಬ್ಬ ಆಚರಣೆ

## ಸ್ವ-ಉದ್ಯೋಗಕ್ಕಾಗಿ ಸ್ವಾವಲಂಬನ್ ಯೋಜನೆ






ದಿನಾಂಕ 02.01.2020 ರಂದು ಸೇವಾಧಾಮದ ನೂತನ ಕೈಪಿಡಿಯನ್ನು ಬೆಳ್ತಂಗಡಿಯ ಖ್ಯಾತ ಉದ್ಯಮಿ ಮತ್ತು ಸಂಸ್ಥೆಯ ಹಿತೈಷಿ ರೊಟೇರಿಯನ್ ಯಶವಂತ ಪಟವರ್ಧನ್‌ರವರು ಬಿಡುಗಡೆ ಮಾಡಿದರು. ಸೇವಾಧಾಮದಲ್ಲಿ ಬೆಳ್ತಂಗಡಿಯ ಖ್ಯಾತ ಉದ್ಯಮಿ ರೊI ಯಶವಂತ್ ಪಟವರ್ಧನ್‌ರವರು ತಮ್ಮ ಹುಟ್ಟುಹಬ್ಬವನ್ನು ಆಚರಿಸಿದರು. ಈ ಸಂದರ್ಭದಲ್ಲಿ ಸೇವಾಭಾರತಿಯ ಅಧ್ಯಕ್ಷರಾದ ಶ್ರೀ ಕೆ. ವಿನಾಯಕ ರಾವ್, ಸೇವಾಧಾಮದ ಸಂಚಾಲಕರಾದ ಶ್ರೀ ಪುರಂದರ ರಾವ್, ಶ್ರೀಮತಿ ರಶ್ಮಿ ಪಟವರ್ಧನ್, ಶ್ರೀ ಸೋಮನಾಥ್ ಭಟ್, ಶ್ರೀಮತಿ ಲಕ್ಷ್ಮೀಬಾಯಿ, ಸೇವಾಭಾರತಿಯ ಟ್ರಸ್ಟಿ ಶ್ರೀ ಕೆ. ಕುಸುಮಾಕರ್, ಪ್ರಬಂಧಕರಾದ ಶ್ರೀ ಮೋಹನ್ ಎಸ್. ನಿಡ್ಲೆ ಹಾಗೂ ಸಿಬ್ಬಂದಿ ವರ್ಗ ಉಪಸ್ಥಿತರಿದ್ದರು.

## ಸೇವಾಧಾಮ ಪುನಃಶ್ಚೇತನ ಕೇಂದ್ರಕ್ಕೆ ಭೇಟಿ

ದಿನಾಂಕ 29.01.2020 ರಂದು ಸೇವಾಧಾಮ ಪುನಃಶ್ಚೇತನ ಕೇಂದ್ರಕ್ಕೆ ಬಂಟ್ವಾಳ LIC ABM(S) ಶ್ರೀಪಾದ್, ಬೆಳ್ತಂಗಡಿ, LIC BM ದೇವಪ್ಪ ನಾಯ್ಕ, ಸದಾನಂದ




ಕಾಮತ್ ಮ್ಯಾನೇಜರ್ ಸೇಲ್ಸ್ LIC Udupi Division, ಉದಯಶಂಕರ್ DO LIC ಭೇಟಿ ನೀಡಿದರು. ಈ ಸಂದರ್ಭದಲ್ಲಿ ಸೇವಾಭಾರತಿ ಅಧ್ಯಕ್ಷರಾದ ಕೆ. ವಿನಾಯಕ ರಾವ್ ಉಪಸ್ಥಿತರಿದ್ದರು.

## ಬೆನ್ನುಮೂಳೆ ಮುರಿತಕ್ಕೊಳಗಾದವರಿಗೆ ಉಚಿತ ವೈದ್ಯಕೀಯ ತಪಾಸಣಾ ಶಿಬಿರ

### ಮಂಗಳೂರು

ಸೇವಾಭಾರತಿ ಕನ್ಯಾಡಿ ಇದರ ಘಟಕ 'ಸೇವಾಧಾಮ' ನೇತೃತ್ವದಲ್ಲಿ ಇಂಡಿಯಾನಾ ಹಾಸ್ಪಿಟಲ್ ಮತ್ತು ಹಾರ್ಟ್ ಇನ್ಸ್ಟಿಟ್ಯೂಟ್, ಮಂಗಳೂರು, ಫಿಸಿಯೋಥೆರಪಿ ವಿಭಾಗ, ಇವರ ಸಹಕಾರದೊಂದಿಗೆ ರೋಟರಿ ಕ್ಲಬ್ ಆಫ್ ಮಂಗಳೂರು ಡೌನ್ಟೌನ್




ಹಾಗೂ ಎ.ಪಿ.ಡಿ ಸಂಸ್ಥೆ ಬೆಂಗಳೂರು ಇವುಗಳ ಸಹಭಾಗಿತ್ವದಲ್ಲಿ ಬೆನ್ನುಮೂಳೆ ಮುರಿತಕ್ಕೊಳಗಾದವರ ಪುನಃಶ್ಚೇತನ ಕೇಂದ್ರ ಸೇವಾಧಾಮ, ಸೌತಡ್ಕ ಇದರ ಆಶ್ರಯದಲ್ಲಿ 3 ದಿನಗಳ ವಸತಿ ಸಹಿತ ಉಚಿತ ವೈದ್ಯಕೀಯ ತಪಾಸಣಾ ಶಿಬಿರಕ್ಕೆ ಜ. 30 ರಂದು ಚಾಲನೆ ನೀಡಲಾಯಿತು.

## 'ಸೇವಾಧಾಮ' ನೇತೃತ್ವದಲ್ಲಿ ಬೆನ್ನುಮೂಳೆ ಮುರಿತಕ್ಕೊಳಗಾದವರಿಗೆ 3 ದಿನಗಳ ವಸತಿ ಸಹಿತ ಉಚಿತ ವೈದ್ಯಕೀಯ ತಪಾಸಣಾ ಶಿಬಿರ

**ಮಂಗಳೂರು :** ಸೇವಾಭಾರತಿ ಕನ್ಯಾಡಿ ಇದರ ಘಟಕ 'ಸೇವಾಧಾಮ' ನೇತೃತ್ವದಲ್ಲಿ ಇಂಡಿಯಾನಾ ಹಾಸ್ಪಿಟಲ್ ಮತ್ತು ಹಾರ್ಟ್ ಇನ್ಸ್ಟಿಟ್ಯೂಟ್, ಮಂಗಳೂರು, ಫಿಸಿಯೋಥೆರಪಿ ವಿಭಾಗ, ಇವರ ಸಹಕಾರದೊಂದಿಗೆ ರೋಟರಿ ಕ್ಲಬ್ ಆಫ್ ಮಂಗಳೂರು ಡೌನ್ಟೌನ್ ಹಾಗೂ ಎ. ಪಿ. ಡಿ ಸಂಸ್ಥೆ ಬೆಂಗಳೂರು ಇವುಗಳ ಸಹಭಾಗಿತ್ವದಲ್ಲಿ ಬೆನ್ನುಮೂಳೆ ಮುರಿತಕ್ಕೊಳಗಾದವರ ಪುನಃಶ್ಚೇತನ ಕೇಂದ್ರ ಸೇವಾಧಾಮ, ಸೌತಡ್ಕ ಇದರ ಆಶ್ರಯದಲ್ಲಿ ನಡೆದ 3 ದಿನಗಳ ವಸತಿ ಸಹಿತ ಉಚಿತ




ವೈದ್ಯಕೀಯ ತಪಾಸಣಾ ಶಿಬಿರದ ಸಮಾರೋಪ ದಿ. 01 ಫೆಬ್ರವರಿ 2020 ರಂದು ನಡೆಯಿತು.

## ಖ್ಯಾತ ವೈದ್ಯರ ಭೇಟಿ

ದಿನಾಂಕ : 09.03.2020 ರಂದು ಸೇವಾಭಾರತಿಯ ಸಂಸ್ಥೆಯ ಅಧ್ಯಕ್ಷರಾದ ವಿನಾಯಕ ರಾವ್ ಹಾಗೂ ಟ್ರಸ್ಟಿ ಕೆ. ಕುಸುಮಾಕರ ಗೌಡ ಇವರುಗಳು ಕೆನರಾ ಸ್ಪೈನ್ ಫಾರಂ ಮಂಗಳೂರು ಇದರ ಕಾರ್ಯದರ್ಶಿ ಡಾ. ಜನಾರ್ಧನ್ ಐತಾಳ್ ಹಾಗೂ ಖಜಾಂಚಿಯಾದ ಡಾ. ಈಶ್ವರ್ ಕೀರ್ತಿ ಅವರನ್ನು ಭೇಟಿ ಮಾಡಿ, ಬೆನ್ನುಮೂಳೆ ಮುರಿತಕ್ಕೊಳಗಾದವರ ಮುಂದಿನ ಜೀವನ ನಿರ್ವಹಣೆ ಹಾಗೂ ಅದಕ್ಕೆ ಸ್ಪಂದಿಸಬಹುದಾದ ಕ್ರಮಗಳ ಬಗ್ಗೆ ಚರ್ಚೆ ನಡೆಸಿದರು.

# ನಮ್ಮೊಂದಿಗೆ ಈ ವರ್ಷ ಕೈ ಜೋಡಿಸಿದ ಸಂಘ–ಸಂಸ್ಥೆಗಳು

- ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ (ನಿ.), ಧರ್ಮಸ್ಥಳ.
- ರೋಟರಿ ಕ್ಲಬ್, ಬೆಳ್ತಂಗಡಿ.
- ತುಳು ಶಿವಳ್ಳಿ ಸಭಾ (ರಿ.), ಉಜಿರೆ.
- ಹವ್ಯಕ ವಲಯ, ವೇಣೂರು.
- ರೋಟರಿ ಕ್ಲಬ್, ಮಡಂತ್ಯಾರ್.
- ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ (ನಿ.), ವೇಣೂರು.
- ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ (ನಿ.), ಅಳದಂಗಡಿ.
- ಗ್ರಾಮ ಪಂಚಾಯತ್, ಕಣಿಯೂರು, ಬೆಳ್ತಂಗಡಿ ತಾಲೂಕು.
- ಟೊಯೋಡಾ ಗೋಸಾಯಿ ಸೌತ್ ಇಂಡಿಯನ್ ಪ್ರೈವೇಟ್ ಲಿಮಿಟೆಡ್, ರಾಮನಗರ.
- ಅಸೋಸಿಯೇಷನ್ ಆಫ್ ಪೀಪಲ್ ವಿತ್ ಡಿಸೆಬಿಲಿಟಿ, ಬೆಂಗಳೂರು.
- PCS ಇಂಡಸ್ಟ್ರೀಸ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು.
- ಭಗವತಿ ಮಹಿಳಾ ಸ್ವ–ಸಹಾಯ ಸಂಘ, ಕನ್ಯಾಡಿ.
- ರೋಟರಿ ಕ್ಲಬ್, ಸುಳ್ಯ.
- ಲಯನ್ಸ್ ಕ್ಲಬ್, ಬಂಟ್ವಾಳ.
- ನೈಮಿಷ ಸ್ಪೈಸಸ್, ಸೌತಡ್ಕ.
- ಗ್ರಾಮ ಪಂಚಾಯತ್, ಮಡಂತ್ಯಾರು.
- ಕೆಮ್‌ಟ್ರೆಂಡ್ ಕೆಮಿಕಲ್ಸ್ ಕೋ ಪ್ರೈವೇಟ್ ಲಿಮಿಟೆಡ್, ಬೆಂಗಳೂರು.
- ಗ್ರಾಮ ಪಂಚಾಯತ್, ಶಿರ್ಲಾಲು.
- ಶ್ರೀ ಸುಬ್ರಹ್ಮಣ್ಯ ಸಹಕಾರಿ ಸಂಘ (ರಿ.), "ಬೃಂದಾವನ", ಸಂತೆಕಟ್ಟೆ, ಬೆಳ್ತಂಗಡಿ.
- ಮಲ್ಪೆ ಮಧ್ವರಾಜ್ ಚಾರಿಟೇಬಲ್ ಟ್ರಸ್ಟ್ (ರಿ.), ಉಡುಪಿ.
- ಸಹಕಾರಿ ಸೇವಾ ಬ್ಯಾಂಕ್ (ನಿ.), ಮೂಡಬಿದ್ರೆ.
- ಮಾತೃಭೂಮಿ ಸೌಹಾರ್ದ ಸಹಕಾರಿ ಬ್ಯಾಂಕ್ (ನಿ.), ಮಂಗಳೂರು.
- ವ್ಯಾಸರಾಯ ಸೇವಾ ಸಹಕಾರಿ ಬ್ಯಾಂಕ್ (ನಿ.), ಬಜ್ಪೆ.
- ಜನ್ನು ಲಿಕ್ವರ್ ಕಂಪನಿ, ಹಾವೇರಿ.
- ಹ್ಯೂಮಾನಿಟಿ ಟ್ರಸ್ಟ್ (ರಿ.), ಬೆಳ್ಮಣ್ಣು.
- ಯುರೋಲಾಜಿ ರಿಸರ್ಚ್ ಆಂಡ್ ಫಿಲಂತ್ರೋಪಿ ಟ್ರಸ್ಟ್, ಬೆಂಗಳೂರು.
- ಇಂಡಿಯನ್ ಸೀನಿಯರ್ ಚೇಂಬರ್, ಬೆಳ್ತಂಗಡಿ.
- ಜಿಲ್ಲಾ ಖಜಾನೆ ಇಲಾಖೆ, ಮಂಗಳೂರು.
- ಗ್ರಾಮ ಪಂಚಾಯತ್, ಕಲ್ಮಂಜ.
- ರೋಟರಿ ಕ್ಲಬ್, ಬಂಟ್ವಾಳ.
- ಕಮ್ಮಾಜೆ ಇಂಡಸ್ಟ್ರಿ, ಬೆಂಗಳೂರು.
- ಸ್ಥಳೀಯರಿಂದ ಸೇವಾನಿಧಿ ಮತ್ತು ವೈಯಕ್ತಿಕ ದಾನಿಗಳು.

# SEVA BHARATHI (REGD)

OFFICE: SEVANIKETHANA, KANYADY II
DHARMASTHALA POST AND VILLAGE, DAKSHINA KANNADA, KARNATAKA -574216

## INCOME AND EXPENDITURE ACCOUNT FOR THE YEAR ENDING 31-03-2020

| Expenditure | | Amount | Income | Amount |
|---|---|---|---|---|
| **To Aarogya Bharathi Project** | | | Donation Received | 54,34,072.00 |
| Blood Donation Camp Expenses | 29,843.00 | | Interest Income | 7,145.09 |
| Ambulance Services | 29,648.00 | 59,491.00 | Income from Ambulance Services | 11,930.00 |
| **To Durga Matru Mandali Project** | | | | |
| Tailoring Course Expenses | | 22,755.00 | | |
| **To Balabharathi Project** | | | | |
| Balotsava | 38,520.00 | | | |
| Supervision Expenses | 2,923.00 | | | |
| Training Expenses | 1,800.00 | | | |
| Teachers' Salary | 48,846.00 | 92,089.00 | | |
| **To Sevadhama Project** | | | | |
| Inmates Rehabilitation Expenses | 6,85,821.00 | | Rehabilitation Fees | 7,34,610.00 |
| Office Maintanance | 6,99,790.92 | | | |
| Wheel Chair Distribution | 5,95,916.00 | | | |
| Medical Camp Program | 1,22,256.00 | | | |
| Staff Salary | 14,31,576.00 | | | |
| Building Maintanance | 25,973.00 | | | |
| Training Expenses | 28,439.00 | 35,89,771.92 | | |
| **To Other Programs and Projects** | | | | |
| Annual Day Expenses | 87,941.00 | | | |
| Solar Home Lighting Program | 2,10,000.00 | | | |
| Donations made | 86,000.00 | | | |
| Staff Salary | 94,133.00 | | | |
| Horticultural Facilitator Salary | 54,770.00 | | | |
| Panaka Distribution Program | 5,865.00 | 5,38,709.00 | | |
| **Office Administration Expenses** | | | | |
| Sevabharathi Office Maintanance | 1,16,769.00 | | | |
| Trustees' Meeting Expenses | 3,915.00 | | | |
| Interest on Loan | 17,220.00 | | | |
| Bank Charges | 11,903.30 | 1,49,807.30 | | |
| **To Depreciation written off (As per Schedule)** | | 2,36,714.00 | | |
| **To Excess of Income over Expenditure** | | 14,98,419.87 | | |
| TOTAL | | 61,87,757.09 | TOTAL | 61,87,757.09 |

**Place: Kanyady**
**Date : 12-12-2020**

**For Sevabharathi Trust**

**As per my Audit Report**

PRESIDENT SECRETARY TREASURER

CA. PRABHAKAR NARASIMHA NAYAK B.Com, LL.B, F.C
M.No.198..
CHARTERED ACCOUNTANT
UDUPI - 576 101

# SEVA BHARATHI (REGD)

OFFICE: SEVANIKETHANA, KANYADY II

DHARMASTHALA POST AND VILLAGE, DAKSHINA KANNADA, KARNATAKA -574216

## BALANCE SHEET AS ON 31-03-2020

| Funds & Liabilities | | Amount | Assets | | Amount |
|---|---|---|---|---|---|
| General Fund | 6,55,539.81 | | Fixed Assets (As per schedule) | | |
| Add: Excess of Income | | | SEVA BHARATHI | | |
| over Expenditure | 14,98,419.87 | 21,53,959.68 | Office Building | 3,17,588.00 | |
| | | | Ambulance | 1,61,166.00 | |
| Building & Infrastructure Fund | | 8,00,000.00 | Camera | 3,017.00 | |
| | | | Computer | 13,522.00 | |
| | | | Electrical Fittings | 90,454.00 | |
| Bills Payable | | 2,56,692.00 | Tailoring Machine | 18,428.00 | |
| | | | Furniture | 41,891.00 | |
| | | | Vessels & Dinning Table | 62,724.00 | 7,08,790.00 |
| | | | SEVADHAMA | | |
| | | | Medical Equipments | 55,598.00 | |
| | | | Office Equipment | 284,482.00 | |
| | | | Beds and Cots | 32,346.00 | |
| | | | Machinery | 304,100.00 | |
| | | | Motor Cycle | 93,825.00 | |
| | | | Refrigerator | 23,940.00 | |
| | | | Wheel Chair | 23,598.00 | |
| | | | Camera | 46,231.00 | |
| | | | Inverter | 13,875.00 | 8,77,995.00 |
| | | | Closing Balances | | |
| | | | Cash in Hand | 86.00 | |
| | | | Cash at Bank | 16,23,780.68 | 16,23,866.68 |
| TOTAL | | 32,10,651.68 | TOTAL | | 32,10,651.68 |

Place: Kanyady

Date : 12-12-2020

For Sevabharathi Trust

As per my Audit Report

PRESIDENT SECRETARY TREASURER

CA. PRADHAKAR NARASIMHA NAYAK B.Com, LL.B, F.C
M.No.19854
CHARTERED ACCOUNTANT
UDUPI - 576 101




## ಸೇವಾಧಾಮ
## ಬೆನ್ನುಮೂಳೆ ಮುರಿತಕ್ಕೊಳಗಾದವರಿಗೆ ಪುನಃಶ್ಚೇತನ ಕೇಂದ್ರ

ಬೆನ್ನುಮೂಳೆ ಮುರಿತಕ್ಕೊಳಗಾದವರನ್ನು ಗುರುತಿಸಿ, ದ್ವಿತೀಯ ಹಂತದ ತೊಡಕುಗಳನ್ನು ತಡೆಗಟ್ಟಿ, ಅಗತ್ಯ ವೈದ್ಯಕೀಯ ನೆರವನ್ನು ನೀಡಿ ದಿವ್ಯಾಂಗರಲ್ಲಿ ಹಾಗೂ ಕುಟುಂಬದವರಲ್ಲಿ ಆತ್ಮವಿಶ್ವಾಸವನ್ನು ತುಂಬಿಸುವುದು, ಸ್ವಾವಲಂಬಿ ಬದುಕಿಗೆ ಅಗತ್ಯವಾದ ವೃತ್ತಿ ಕೌಶಲಗಳನ್ನು ನೀಡಿ, ಚಲನಾಶೀಲತೆಗಳನ್ನು ಹೆಚ್ಚಿಸುವ ಮೂಲಕ ಸಮಾಜದೊಂದಿಗೆ ಪುನರ್ ಸಂಯೋಜನೆ ಮಾಡುವ ಗುರಿಯನ್ನಿಟ್ಟುಕೊಂಡು ಎ.ಪಿ.ಡಿ. ಬೆಂಗಳೂರು ಮತ್ತು ಶ್ರೀ ಮಹಾಗಣಪತಿ ಸೇವಾ ಟ್ರಸ್ಟ್ (ರಿ.), ಸೌತಡ್ಕ ಇದರ ಸಹಭಾಗಿತ್ವದೊಂದಿಗೆ “ಸೇವಾಧಾಮ” ಬೆನ್ನುಮೂಳೆ ಮುರಿತಕ್ಕೊಳಗಾದವರ ಪುನಃಶ್ಚೇತನ ಕೇಂದ್ರವು ದಿನಾಂಕ 16.09.2018ರಂದು ಕೊಕ್ಕಡ ಗ್ರಾಮದ ಸೌತಡ್ಕ (ಶ್ರೀ ಮಹಾಗಣಪತಿ ದೇವಸ್ಥಾನ ಎದುರುಗಡೆ) ಎಂಬಲ್ಲಿ ಪ್ರಾರಂಭಗೊಂಡಿದೆ.

ಸೇವಾಧಾಮ ಪುನಃಶ್ಚೇತನ ಕೇಂದ್ರವು 10 ಬೆಡ್‌ಗಳನ್ನು ಹೊಂದಿದ್ದು, ದಿವ್ಯಾಂಗರು ಮೂರು ತಿಂಗಳಲ್ಲಿ ಪುನಃಶ್ಚೇತನಗೊಂಡು ದೈಹಿಕ ಹಾಗೂ ಮಾನಸಿಕವಾಗಿ ಮುಂದಿನ ಜೀವನ ನಡೆಸಲು ಸದೃಢರಾಗಿ ತೆರಳದ್ದಾರೆ. ಪ್ರಸ್ತುತ ಪುನಃಶ್ಚೇತನ ಕೇಂದ್ರದಲ್ಲಿ 8 ಮಂದಿ ದಿವ್ಯಾಂಗರು ಪುನಃಶ್ಚೇತನಗೊಳ್ಳುತ್ತಿದ್ದಾರೆ. ಈಗಾಗಲೇ 78 ಮಂದಿ ಬೆನ್ನುಮೂಳೆ ಮುರಿತಕ್ಕೊಳಗಾದ ದಿವ್ಯಾಂಗರು ಪುನಃಶ್ಚೇತನಗೊಂಡು ಸ್ವ-ಉದ್ಯೋಗ ಮಾಡಿಕೊಂಡು ಬೇರೆಯವರಿಗೆ ಮಾದರಿಯಾಗಿದ್ದಾರೆ.

ಸೇವಾಧಾಮವು ದಿನನಿತ್ಯ ಚಟುವಟಿಕೆಗಳ ತರಬೇತಿ, ಫಿಸಿಯೋಥೆರಪಿ, ವೈದ್ಯಕೀಯ ಚಿಕಿತ್ಸೆಗಳು, ಪ್ರಾಣಾಯಾಮ, ಗಾಲಿಕುರ್ಚಿ ತರಬೇತಿ, ಸ್ವಾವಲಂಬಿ ಬದುಕಿಗೆ ವೃತ್ತಿ ಕೌಶಲ ತರಬೇತಿ ಹಾಗೂ ಸೂಕ್ತ ಪರಿಕರಗಳನ್ನು ಸುಸಜ್ಜಿತ ವ್ಯವಸ್ಥೆಯ ಮೂಲಕ ಕಲ್ಪಿಸಿಕೊಡುತ್ತಿದೆ.




ಸೇವಾಧಾಮ ಪುನಃಶ್ಚೇತನ ಕೇಂದ್ರ, ಸೌತಡ್ಕ

# ನಮ್ಮ ಕಳಕಳಿಯ ಮನವಿ

ಸೇವೆಯೇ ಕಾಯಕವೆಂದು ಸಮಾಜದ ಉನ್ನತಿಯನ್ನು ಬಯಸುವ ಚಿಂತನೆಯು ನಮ್ಮಲ್ಲಿ ಮೂಡಬೇಕು. ಈ ನಿಟ್ಟಿನಲ್ಲಿ ನಮ್ಮ ಸಂಸ್ಥೆಯು ಕಾರ್ಯೋನ್ಮುಖವಾಗಿರುವ ಸೇವಾಕಾರ್ಯಗಳಿಗೆ ತಮ್ಮಂತಹ ಧನ ದಾನಿಗಳೇ ಆಧಾರಸ್ತಂಭ. ತಮ್ಮ ಆದಾಯದ ಕಿಂಚಿತ್ತನ್ನು ಇಂತಹ ಸಾಮಾಜಿಕ ಕಾರ್ಯಗಳಿಗೆ ಮುಡಿಪಾಗಿಟ್ಟಲ್ಲಿ ನಮ್ಮ ರಾಷ್ಟ್ರವನ್ನು ಸಶಕ್ತ ಮತ್ತು ಸಕ್ಷಮ ರಾಷ್ಟ್ರವನ್ನಾಗಿಸಬಹುದು.

ಈ ಸೇವಾಕಾರ್ಯಕ್ಕೆ ನಮ್ಮೊಂದಿಗೆ ಕೈಜೋಡಿಸುವಂತೆ ಈ ಮೂಲಕ ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇವೆ. ಕರವಿನಾಯಿತಿ 80 ಜಿ ಯ ಸೌಲಭ್ಯವೂ ಲಭ್ಯವಿದೆ.

ಹೆಸರು : ಸೇವಾಭಾರತಿ
ವಿಳಾಸ : ಸೇವಾಧಾಮ
ಸೌತಡ್ಕ ಶ್ರೀ ಮಹಾಗಣಪತಿ ದೇವಸ್ಥಾನದ ಎದುರುಗಡೆ
ಕೊಕ್ಕಡ ಗ್ರಾಮ ಬೆಳ್ತಂಗಡಿ ತಾಲೂಕು, ದ.ಕ– 574 198
ಮೊ. : 9945491241/9448254888
ಖಾತೆ ನಂಬ್ರ : 01682200072637, IFSC Code:CNRB0010168
Canara Bank, Kokkada Branch
Web site : www.sevaabharathi.org
Email : sevabharathikanyady@gmail.com

ಮಂಜುಶ್ರೀ ಪ್ರಿಂಟರ್ಸ್, ಉಜಿರೆ